# ಬೆಳಗಾವಿ ವಾರ್ತೆ

ಕನ್ನಡ ದಿನ ಪತ್ರಿಕೆ, ಬೆಳಗಾವಿ

ಸಂಪಾದಕರು : ಮಹೇಶ್ವರಿ ಭೀಮಶಿ ಭರಮಣ್ಣವರ
EDITOR : MAHESHWARI BHIMASHI BHARAMANNAVARA

BELAGAVI VARTE
KANNADA DAILY MORNING BELAGAVI

G-mail: belagavivarte1@gmail.com

Volume: 01 | Issue : 17 | TUESDAY 24-03-2026 | PRGI No : KNKAN/26/A0962 | Pages:4 | Rs.2.00 | M: 9742418836


## ಜಲಮಂಡಳಿಯಿಂದ ಬಾಕಿ ಪಾವತಿಗೆ ಒಟಿಎಸ್ ಯೋಜನೆ



ಬೆಂಗಳೂರು: ಬೆಂಗಳೂರು ನಾಗರಿಕರಿಗೆ ಜಲಮಂಡಳಿಯು ಯುಗಾದಿ ಉಡುಗೊರೆ ನೀಡಿದ್ದು, ದೀರ್ಘಕಾಲದಿಂದ ನೀರಿನ ಬಿಲ್ ಬಾಕಿ ಉಳಿಸಿಕೊಂಡಿರುವ ಗ್ರಾಹಕರಿಗೆ ಅನುಕೂಲ ಕಲ್ಪಿಸಲು, 'ಒನ್ ಟೈಮ್ ಸೆಟಲ್‌ಮೆಂಟ್' ಯೋಜನೆಯನ್ನು ಬರುವ ಏಪ್ರಿಲ್ ತಿಂಗಳಿನಿಂದ ಜಾರಿಗೊಳಿಸಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದ್ದಾರೆ.

ಬೆಂಗಳೂರು ನಗರದ ಜನರಿಗೆ ಅನುಕೂಲ ಮಾಡಿಕೊಡಲು ಬಾಕಿ ಉಳಿಸಿಕೊಂಡಿರುವ ಬಿಲ್ ನ ಅಸಲು ಪಾವತಿಸಿದಲ್ಲಿ ಬಡ್ಡಿಯನ್ನು ಮನ್ನಾ ಮಾಡಲಾಗುವುದು ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವ್ಯಾಪ್ತಿಯಲ್ಲಿರುವ ಸುಮಾರು 11 ಲಕ್ಷ ನೀರಿನ ಸಂಪರ್ಕಗಳ ಪೈಕಿ, 5.11 ಲಕ್ಷ ಗ್ರಾಹಕರು ಬಿಲ್ ಬಾಕಿ ಉಳಿಸಿಕೊಂಡಿದ್ದಾರೆ. 2026ರ ಫೆಬ್ರವರಿ ಅಂತ್ಯದ ಮಾಹಿತಿಯಂತೆ, ಒಟ್ಟು ಬಾಕಿ ಮೊತ್ತ ರೂ. 851.33 ಕೋಟಿಗಳಾಗಿದ್ದು, ಇದರಲ್ಲಿ ಅಸಲು ಮೊತ್ತ ರೂ. 539.43 ಕೋಟಿ ಹಾಗೂ ಬಡ್ಡಿ ರೂ. 311.90 ಕೋಟಿ ಸೇರಿದೆ.

ಬಾಕಿಯನ್ನು ಸುಲಭವಾಗಿ ಪಾವತಿಸಲು ಹಾಗೂ ಗ್ರಾಹಕರ ಮೇಲಿನ ಆರ್ಥಿಕ ಹೊರೆ ತಗ್ಗಿಸಲು, ಏಪ್ರಿಲ್ 2026 ರಿಂದ ಜೂನ್ 2026 ರವರೆಗೆ (3 ತಿಂಗಳ ಅವಧಿ) ಈ ಓ ಟಿ ಎಸ್ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ ಎಂದು ಡಿಸಿಎಂ ಅವರು ತಿಳಿಸಿದ್ದಾರೆ.

**ಶೇ. 100 ರಷ್ಟು ಬಡ್ಡಿ ಮನ್ನಾ:** ಈ 3 ತಿಂಗಳ ಯೋಜನೆ ಅವಧಿಯಲ್ಲಿ ಗ್ರಾಹಕರು ತಮ್ಮ ಅಸಲು ಮೊತ್ತವನ್ನು ಸಂಪೂರ್ಣವಾಗಿ ಪಾವತಿಸಿದರೆ, ಏಪ್ರಿಲ್ 2026ರವರೆಗೆ ಸಂಗ್ರಹವಾಗಿರುವ ಸಂಪೂರ್ಣ ಬಡ್ಡಿಯನ್ನು (ಶೇ. 100ರಷ್ಟು) ರಿಬೇಟ್ ರೂಪದಲ್ಲಿ ಮನ್ನಾ ಮಾಡಲಾಗುತ್ತದೆ.

ಈ ಯೋಜನೆಯು ಗೃಹ ವಾಣಿಜ್ಯ ಕೈಗಾರಿಕಾ ಸೇರಿದಂತೆ ಬೆಂಗಳೂರು ಜಲ ಮಂಡಳಿ ಯ ಎಲ್ಲ ವರ್ಗದ ಗ್ರಾಹಕರಿಗೂ ಅನ್ವಯವಾಗಲಿದೆ. ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳ ಬಾಕಿಗಳಿಗೂ ಲೆಕ್ಕಪತ್ರ ಸಮನ್ವಯದ ಮೂಲಕ ವ್ಯವಸ್ಥೆ ಕಲ್ಪಿಸಲಾಗುತ್ತದೆ.

ಗ್ರಾಹಕರಿಗೆ ಮಾಹಿತಿ ಒದಗಿಸುವ ಹಾಗೂ ಪಾವತಿ ಪ್ರಕ್ರಿಯೆಯನ್ನು ಅತ್ಯಂತ ಸರಳಗೊಳಿಸುವ ನಿಟ್ಟಿನಲ್ಲಿ, ಬೆಂಗಳೂರು ಜಲ ಮಂಡಳಿ ವತಿಯಿಂದ ಪ್ರತಿ ಬಾಕಿದಾರರಿಗೆ ಅವರ ಆರ್ ಆರ್ ಸಂಖ್ಯೆ, ಅಸಲು ಮೊತ್ತ, ಮನ್ನಾ ಆಗುವ ಬಡ್ಡಿ ಮೊತ್ತ ಹಾಗೂ ಪಾವತಿಸಬೇಕಾದ ಅಂತಿಮ ಮೊತ್ತದ ವಿವರಗಳನ್ನು ಒದಗಿಸಲಾಗುವುದು. ಗ್ರಾಹಕರು ಬೆಂಗಳೂರು ಜಲ ಮಂಡಳಿ ಕಿಯೋಸ್ಕ್, ಆನ್‌ಲೈನ್ ಪೋರ್ಟಲ್ ಹಾಗೂ ವಿವಿಧ ಡಿಜಿಟಲ್ ಪಾವತಿ ವಿಧಾನಗಳ ಮೂಲಕ ಸುಲಭವಾಗಿ ಹಣ ಪಾವತಿಸಬಹುದು.

"ನಗರದ 5.11 ಲಕ್ಷಕ್ಕೂ ಹೆಚ್ಚು ಗ್ರಾಹಕರಿಗೆ ಆರ್ಥಿಕ ನೆರವು ನೀಡುವ ಹಾಗೂ ಮಂಡಳಿಯ ಆರ್ಥಿಕ ಸ್ಥಿತಿಯನ್ನು ಬಲಪಡಿಸುವ ದ್ವಿಮುಖ ಉದ್ದೇಶದಿಂದ ಈ ಯುಗಾದಿ ಕೊಡುಗೆಯನ್ನು ಜಾರಿಗೊಳಿಸಲಾಗುತ್ತಿದೆ. ಬರೋಬ್ಬರಿ 311 ಕೋಟಿ ರೂ.ಗಳ ಬಡ್ಡಿ ಮನ್ನಾ ಮಾಡುವ ಮೂಲಕ ನಾಗರಿಕರ ಮೇಲಿನ ಹೊರೆಯನ್ನು ಗಣನೀಯವಾಗಿ ಇಳಿಸಲಾಗುತ್ತಿದೆ. ಸಾರ್ವಜನಿಕರು ಮುಂಬರುವ 3 ತಿಂಗಳ ಈ ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದ್ದಾರೆ.

## ಉಪ ಚುನಾವಣೆ: 'ಮುಸ್ಲಿಮರು ಹೆಚ್ಚಿದ್ದೇವೆ.. ನಮಗೇ ಟಿಕೆಟ್ ನೀಡಬೇಕು..': ಸಚಿವ Zameer Ahmed ರಾಜಿನಾಮೆ ಬಾಂಬ್?, 'ಕೈ'ಗೆ ಹೊಸ ತಲೆನೋವು!

ಬೆಂಗಳೂರು: ದಾವಣಗೆರೆ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಲ್ಲಿನ ಕಾಂಗ್ರೆಸ್ ಪಕ್ಷದ ಟಿಕೆಟ್ ಭಾರಿ ಜಟಾಪಟಿಯೇ ನಡೆಯುತ್ತಿದ್ದು, ಇತ್ತ ಸಚಿವ ಜಮೀಹ್ ಅಹ್ಮದ್ ಕ್ಷೇತ್ರದಲ್ಲಿ ತಮ್ಮ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ತಮ್ಮ ಸಮುದಾಯಕ್ಕೇ ಟಿಕೆಟ್ ನೀಡಬೇಕು ಎಂದು ಒತ್ತಾಯಿಸಿದ್ದಾರೆ ಎಂದು ಹೇಳಲಾಗಿದೆ.

ಹೌದು.. ಉಪ ಚುನಾವಣೆ ಟಿಕೆಟ್ ನೀಡಿಕೆ ವಿಚಾರ ರಾಜ್ಯ ಕಾಂಗ್ರೆಸ್ ನಲ್ಲಿ ಕೋಲಾಹಲವನ್ನೇ ಸೃಷ್ಟಿ ಮಾಡುತ್ತಿದ್ದು, ಟಿಕೆಟ್ ಹಂಚಿಕೆ ಸಂಬಂಧ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ರಾಜ್ಯ ನಾಯಕರ ಜೊತೆ ಮಹತ್ವದ ಸಭೆ ನಡೆಸುತ್ತಿದ್ದಾರೆ. ದಾವಣಗೆರೆ ಕಾಂಗ್ರೆಸ್ ಟಿಕೆಟ್ ವಿಚಾರವಾಗಿ ಶಾಮನೂರು ಕುಟುಂಬ ಮತ್ತು ಮುಸ್ಲಿಂ ಸಮುದಾಯದ ನಾಯಕರ ನಡುವೆ ದೊಡ್ಡ ಹಗ್ಗಜಗ್ಗಾಟವೇ ನಡೆದಿದೆ ಎಂದು ಹೇಳಲಾಗಿದೆ.

ಈ ಸಭೆಯಲ್ಲಿ ಕಾಂಗ್ರೆಸ್ ನಾಯಕ, ಸಚಿವ ಜಮೀರ್ ಅಹಮ್ಮದ್ ರಾಜೀನಾಮೆ ಅಸ್ತ್ರ ಪ್ರಯೋಗಿಸಿದ್ದಾರೆ ಎಂದು ಹೇಳಲಾಗಿದೆ. ಈ ಬಗ್ಗೆ ಮಾಧ್ಯಮವೊಂದು ವರದಿ ಮಾಡಿದ್ದು, ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆ ಟಿಕೆಟ್ ಘೋಷಣೆ ವಿಚಾರವಾಗಿ ನಡೆದ ಸಭೆಯಲ್ಲಿ ಜಮೀರ್ ಅಹಮ್ಮದ್ ರಾಜೀನಾಮೆ ಬಾಂಬ್ ಸಿಡಿಸಿದ್ದಾರೆ.



ಕರ್ನಾಟಕದ ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಕ್ಷೇತ್ರದ ವಿಧಾನಸಭಾ ಉಪಚುನಾವಣೆ ಕುರಿತು ಕಾಂಗ್ರೆಸ್ ಸತತ ಸಭೆ ನಡೆಸುತ್ತಿದೆ. ಟಿಕೆಟ್ ಘೋಷಣೆ ವಿಚಾರವಾಗಿ ತೀವ್ರ ಗೊಂದಲ, ಜಟಾಪಟಿ ಏರ್ಪಟ್ಟಿದೆ. ಹೀಗಾಗಿ ನಿನ್ನೆ ರಾತ್ರಿಯಿಂದ ರಾಜ್ಯ ನಾಯಕರ ಜೊತೆ ಸಭೆ ನಡೆಸುತ್ತಿರುವ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಮುಂದೆ ನಾಯಕರು ವಿವಿದ ಬೇಡಿಕೆ ಮುಂದಿಟ್ಟಿದ್ದಾರೆ.

**ಜಮೀರ್ ಪಟ್ಟೇನು?:** ದಾವಣಗೆರೆ ದಕ್ಷಿಣ ಕ್ಷೇತ್ರದ ಟಿಕೆಟ್ ಮುಸ್ಲಿಮ್ ನಾಯಕರಿಗೆ ನೀಡಬೇಕು ಎಂದು ಜಮೀರ್ ಪಟ್ಟು ಹಿಡಿದಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮುಸ್ಲಿಮರ ಜನಸಂಖ್ಯೆ ಹೆಚ್ಚಿದೆ. ನಮ್ಮ ಸಮುದಾಯಕ್ಕೆ ಟಿಕೆಟ್ ನೀಡಲು ಮೌಲ್ವಿಗಳು,ಮುಸ್ಲಿಂ ಪ್ರಮುಖರು ಆಗ್ರಹಿಸಿದ್ದಾರೆ.

ಹೀಗಾಗಿ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ನೀಡಬೇಕು. ಇಲ್ಲದಿದ್ದರೆ ರಾಜೀನಾಮೆ ನೀಡುವುದಾಗಿ ಜಮೀರ್ ಅಹಮ್ಮದ್ ಹೇಳಿದ್ದಾರೆ. ಆ ಮೂಲಕ ರಣದೀಪ್ ಸಿಂಗ್ ಸುರ್ಜೆವಾಲ ಮುಂದೆ ಜಮೀರ್ ರಾಜೀನಾಮೆ ಅಸ್ತ್ರ ಪ್ರಯೋಗಿಸಿದ್ದಾರೆ ಎಂದು ತಿಳಿದುಬಂದಿದೆ.

## ಮಹಾವೀರ ಜಯಂತಿ: ಪೂರ್ವಭಾವಿ ಸಭೆ



ಬೆಳಗಾವಿ ವಾರ್ತೆ

**ಚನ್ನಮ್ಮನ ಕಿತ್ತೂರು:** ಪ್ರತಿ ವರ್ಷದಂತೆ ಈ ಬಾರಿಯೂ ಮಹಾವೀರ ಜಯಂತಿ ಮಾರ್ಚ 31 ರಂದು ಸಡಗರ ಸಂಭ್ರಮ ವಿಜೃಂಭಣೆಯಿಂದ ಆಚರಿಸಲಾಗುವುದೆಂದು ಪ್ರಭಾರಿ ಗ್ರೇಡ್–2 ತಹಶೀಲ್ದಾರ ಪ್ರಕಾಶ ಕೋರೆ ಹೇಳಿದರು.

ಸ್ಥಳೀಯ ತಹಶೀಲ್ದಾರ ಕಛೇರಿ ಸಭಾಭವನದಲ್ಲಿ ಜರುಗಿದ ಮಹಾವೀರ ಜಯಂತಿ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷಸ್ಥಾನ ವಹಿಸಿಕೊಂಡು ಮಾತನಾಡಿದರು. ಮಹಾವೀರರ ಅಹಿಂಸಾ ತತ್ವ ಮತ್ತು ಇತಿಹಾಸ ಜಗತ್ತಿಗೆ ತಿಳಿಸುವ ಕೆಲಸ ಸರ್ಕಾರ ಜಯಂತಿ ಆಚರಿಸುತ್ತಿದೆ. ಒಂದು ದಿನ ಜರಗುವ ಈ ಜಯಂತಿಯನ್ನು ಎಲ್ಲರೂ ಕೂಡಿ ಹೆಚ್ಚಿನ ಜವಾಬ್ದಾರಿ ತೆಗೆದುಕೊಂಡು ಜೊತೆಗೂಡಿ ಅರ್ಥಪೂರ್ಣವಾಗಿ ಅಚ್ಚುಕಟ್ಟಾಗಿ ಅದ್ದೂರಿಯಿಂದ ಆಚರಿಸೋಣ. ಈ ಜಯಂತಿ ಯಶಸ್ವಿಯಾಗಬೇಕಾದರೆ ಸಾರ್ವಜನಿಕರ ಸಹಕಾರ ಅಗತ್ಯವಿದೆ, ಈ ಜಯಂತಿ ಮಾಡಲು ಸರ್ಕಾರ ಸಹಕಾರ ನೀಡುತ್ತಿದೆ ಎಂದರು. ಈ ಸಭೆಯಲ್ಲಿ ಕಂದಾಯ ನಿರೀಕ್ಷಕ ಎಂ.ಎಂ.ನೀರಲಗಿ, ಮುಖಂಡರು ಉದಯ ಇಂಗಳೆ, ಬಸವರಾಜ ಶಿರಗಾಪೂರ, ಪ್ರಕಾಶ ಇಂಗಳೆ, ವಸಂತ ಪಾಟೀಲ, ಜಿನ್ನಪ್ಪ ವಣ್ಣೂರ, ಮಂಜುನಾಥ ದೊಡ್ಡಣ್ಣವರ ಸೇರಿದಂತೆ ಸಮಾಜದ ಬಾಂಧವರು, ತಾಲೂಕ ಮಟ್ಟದ ಎಲ್ಲ ಅಧಿಖಾರಿಗಳು ಇನ್ನಿತರರಿದ್ದರು.

## ಚಿಕ್ಕೋಡಿ ಪಟ್ಟಣ ಅಭಿವೃದ್ಧಿಗೆ ರೂ.14.48 ಕೋಟಿ ಅನುದಾನ ಮಂಜೂರು– ಗಣೇಶ ಹುಕ್ಕೇರಿ

## ವಿವಿಧ ವಾರ್ಡ್‌ಗಳಲ್ಲಿ ರಸ್ತೆ, ಚರಂಡಿ ಕಾಮಗಾರಿಗಳಿಗೆ ಚಾಲನೆ

ಬೆಳಗಾವಿ ವಾರ್ತೆ

**ಚಿಕ್ಕೋಡಿ:** ಚಿಕ್ಕೋಡಿ ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ರಸ್ತೆ, ಚರಂಡಿ ಹಾಗೂ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರದಿಂದ ರೂ.14 ಕೋಟಿ 48 ಲಕ್ಷ ಅನುದಾನ ಮಂಜೂರಾಗಿದೆ ಎಂದು ಶಾಸಕ ಗಣೇಶ ಹುಕ್ಕೇರಿ ತಿಳಿಸಿದರು.

ಸೋಮವಾರ ಪಟ್ಟಣದ ಝಾರಿ ಗಲ್ಲಿ,ವಿಠ್ಠಲ ದಾಮೋದರ ನಗರ, ಆರ್.ಕೆ ಕಾಲನಿ, ಸಾಯಿ ಮಂದಿರ ಪ್ರದೇಶ, ಹುಡ್ಕೋ ಕಾಲನಿ ಹಾಗೂ ಬಸವೇಶ್ವರ ನಗರದಲ್ಲಿ ಸುಮಾರು ರೂ.3 ಕೋಟಿ ವೆಚ್ಚದ ರಸ್ತೆ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಚಿಕ್ಕೋಡಿ ಪಟ್ಟಣದ ಸಮಗ್ರ ಅಭಿವೃದ್ಧಿಗಾಗಿ ತಮ್ಮೊಂದಿಗೆ ವಿಧಾನ ಪರಿಷತ್ ಸದಸ್ಯರು ಹಾಗೂ ಕರ್ನಾಟಕ ಸರ್ಕಾರದ ನವದೆಹಲಿಯ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಅವರ ವಿಶೇಷ ಪ್ರಯತ್ನದಿಂದ ಈ ಅನುದಾನ ದೊರೆತಿದೆ. ಸಾರ್ವಜನಿಕರು ಹಾಗೂ ವಾರ್ಡ್ ಸದಸ್ಯರ ಬೇಡಿಕೆಯ ಮೇರೆಗೆ ವಿವಿಧ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಹೇಳಿದರು.

ಮುಂಬರುವ ದಿನಗಳಲ್ಲಿ ವಾರ್ಡ್ ನಂ.4 ರ ಸಾವರ್ಕರ್ ನಗರದಲ್ಲಿ ರಸ್ತೆ, ಚರಂಡಿಗೆ ರೂ.50 ಲಕ್ಷ, ವಾರ್ಡ್ ನಂ.13 ಮತ್ತು 21 ರ ಹಾಲಟ್ಟಿ ಹಾಗೂ ಗಣೇಶ ನಗರದಲ್ಲಿ ರೂ.67.10 ಲಕ್ಷ, ವಾರ್ಡ್ ನಂ.22 ರ ಹರಿ ನಗರ ಮತ್ತು ಮಹಾವೀರ ನಗರದಲ್ಲಿ ರಸ್ತೆ ಕಾಮಗಾರಿಗೆ ರೂ.54 ಲಕ್ಷ, ಹೊಸ ಪುರಸಭೆ ಕಚೇರಿ ಸಮೀಪ ಹಾಗೂ ಕವಟಗಿಮಠ ನಗರದಲ್ಲಿ ರೂ.63 ಲಕ್ಷ, ವಾರ್ಡ್ ನಂ.4 ರ ಹೊಸಪೇಟ ಗಲ್ಲಿ, ಜಾಡರ್ ಗಲ್ಲಿ ರಸ್ತೆ ನಿರ್ಮಾಣಕ್ಕೆ ರೂ.21 ಲಕ್ಷ, ವಾರ್ಡ್ ನಂ.18 ಮತ್ತು 21 ರ ಭೀಮನಗರದಲ್ಲಿ ರಸ್ತೆ, ಚರಂಡಿಗೆ ರೂ.50 ಲಕ್ಷ ಇದಲ್ಲದೆ, ಪಟ್ಟಣದ ಪ್ರಮುಖ ಬಸವೇಶ್ವರ ವೃತ್ತದಲ್ಲಿ ಫುಟ್‌ಪಾತ್, ಟ್ರಾಫಿಕ್ ಸಿಗ್ನಲ್ ಹಾಗೂ ವಿದ್ಯುತ್ ದೀಪಗಳ ಅಳವಡಿಕೆಗೆ ರೂ.4.87 ಕೋಟಿ ಮತ್ತು ಬಸ್ ನಿಲ್ದಾಣದಿಂದ ಹಳೆ ಪುರಸಭೆ ಕಚೇರಿವರೆಗೆ ಹಾಗೂ ಕೆ.ಸಿ ರಸ್ತೆಯಿಂದ ಮುದೋಳ–ನಿಪ್ಪಾಣಿ ರಸ್ತೆಯವರೆಗೆ



ಫುಟ್‌ಪಾತ್ ಹಾಗೂ ರಸ್ತೆ ಅಭಿವೃದ್ಧಿಗೆ ರೂ.2 ಕೋಟಿ ಅನುದಾನ ಮಂಜೂರಾಗಿದೆ. ಶೀಘ್ರದಲ್ಲೇ ಈ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಅಧ್ಯಕ್ಷರಾದ ರಾಮಾ ಮಾನೆ, ಪ್ರಭಾಕರ ಕೋರೆ, ನರೇಂದ್ರ ನೇರ್ಲೆಕರ, ಮಾಜಿ ಸದಸ್ಯರಾದ ಶಾಮ ರೇವಡೆ, ಗುಲಾಬ ಬಾಗವಾನ, ಅನೀಲ ಮಾನೆ, ಸಾಬೀರ ಜಮಾದಾರ, ವರ್ದಮಾನ ಸದಲಗೆ, ಪ್ರವೀಣ ಕಾಂಬಳೆ, ಸಂತೋಷ ಜೋಗಳೆ, ವಿಶ್ವನಾಥ ಕಾಮಗೌಡ, ಅಜಯ ಕವಟಗಿಮಠ, ಸತೀಶ ಕುಲಕರ್ಣಿ, ಚಿದಾನಂದ ನವಲಿಹಾಳ, ಸಂದೀಪ ಶೇರಖಾನೆ, ರುಪೇಶ ನೂಲಿ, ಸುರೇಶ ಕಾಳಿಂಗೆ, ಫೀರೋಜ ಕಲಾವಂತ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಜೊತೆಗೆ ಪುರಸಭೆ ಆಡಳಿತಾಧಿಕಾರಿಗಳು, ಉಪ ವಿಭಾಗಾಧಿಕಾರಿ ಸುಭಾಷ ಸಂಪಗಾವೆ ಹಾಗೂ ಮುಖ್ಯಾಧಿಕಾರಿ ಜಗದೀಶ ಈಟಿ ಉಪಸ್ಥಿತರಿದ್ದರು.

## ಬಾಲ್ಯ ವಿವಾಹ ನಿಷೇಧ: ಹೆಚ್ಚುವರಿ ಇಲಾಖೆಗಳ ಸೇರ್ಪಡೆ

ಕೊಪ್ಪಳ: ಬಾಲ್ಯವಿವಾಹ ಮುಕ್ತ ರಾಜ್ಯವನ್ನಾಗಿಸುವ ಹಿನ್ನೆಲೆಯಲ್ಲಿ ಮತ್ತು ಬಾಲ್ಯವಿವಾಹಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ದೃಷ್ಟಿಯಿಂದ ವಿವಿಧ ಇಲಾಖೆಗಳನ್ನು ಹೆಚ್ಚುವರಿಯಾಗಿ ಬಾಲ್ಯವಿವಾಹ ನಿಷೇಧಾಧಿಕಾರಿಗಳನ್ನಾಗಿ ಸೇರ್ಪಡೆಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಅದರಂತೆ ಹೆಚ್ಚುವರಿ ಬಾಲ್ಯವಿವಾಹ ನಿಷೇಧಾಧಿಕಾರಿಗಳನ್ನಾಗಿ ಎಲ್ಲ ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳ ಅಧೀಕ್ಷಕರು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪ ಸಂಖ್ಯಾತರ ಕಲ್ಯಾಣ, ಸಮಾಜ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಗಳ ವಸತಿ ಸಹಿತ/ರಹಿತ ನಿಲಯದ ಎಲ್ಲಾ ನಿಲಯ ಪಾಲಕರು ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಎಲ್ಲಾ ಶಾಲಾ ಶಿಕ್ಷಕರನ್ನು ಸೇರ್ಪಡೆಗೊಳಿಸಲಾಗಿದೆ.

ಆದ್ದರಿಂದ ಇನ್ನುಮುಂದೆ ಜಿಲ್ಲೆಯಲ್ಲಿ ಬಾಲ್ಯವಿವಾಹಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ಮೂಲಕ ಜಿಲ್ಲೆಯನ್ನು ಬಾಲ್ಯವಿವಾಹ ಮುಕ್ತವನ್ನಾಗಿಸುವ ಕಡೆ ಕ್ರಮ ವಹಿಸುವಂತೆ ಮತ್ತು ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿರುದ್ಧ ಸರ್ವೋಚ್ಛ ನ್ಯಾಯಾಲಯದ ನಿರ್ದೇಶನದಂತೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ವಿಶೇಷ ಸೂಚನೆ ನೀಡಿದ್ದಾರೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸಿಂಧು ಅಂಗಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಯುವಕರಿಗೆ ನಾಗರಿಕತೆ, ಸಂಸ್ಕಾರ ಶಿಕ್ಷಣ ನೀಡುವುದು ಅವಶ್ಯ– ಪ್ರಕಾಶ ಪಾಟೀಲ



ಬೆಳಗಾವಿ ವಾರ್ತೆ

**ಮೂಡಲಗಿ :** ಇಂದಿನ ಪ್ರಸ್ತುತ ದಿನಗಳಲ್ಲಿ ಯುವಕರಿಗೆ ನಾಗರಿಕತೆ ಮತ್ತು ಸಂಸ್ಕಾರ ಶಿಕ್ಷಣ ನೀಡುವ ಅವಶ್ಯಕತೆ ಇದೆ ಎಂದು ಕೆ ಎಲ್ ಇ ಸಂಸ್ಥೆಯ ಪ್ರಕಾಶ ಪಾಟೀಲ ಹೇಳಿದರು

ಅವರು ಮುಖ್ಯ ಅತಿಥಿಸ್ಥಾನವಹಿಸಿ ಮಾತನಾಡಿದರು

ಅಧ್ಯಕ್ಷತೆ ವಹಿಸಿದ ಸಂಸ್ಥೆ ಯ ಚೇರ್ಮನ್ ರಮೇಶ ಬೆಳಕೂಡ, ಮಾತನಾಡಿ ವಿದ್ಯಾರ್ಥಿಗಳು ತಮ್ಮ ತಂದೆ ತಾಯಿಯ ಋಣ ತೀರಿಸಲು ಒಳ್ಳೆಯ ಭವಿಷ್ಯಕ್ಕೆ ನಾಂದಿಯಾಗಲು ಕೇವಲ ಶಿಕ್ಷಣ ಮುಖ್ಯ ಅಲ್ಲ , ಸರಕಾರಿ ನೌಕರಿ ಅವಲಂಬಿಸಿ ಕಲಿಯಬೇಡಿ , ತಮ್ಮ ಕುಟುಂಬ ದೊಂದಿಗೆ ಕೃಷಿ ಮತ್ತು ಹಲವು ಕ್ಷೇತ್ರದಲ್ಲಿ ದುಡಿಮೆ ಮಾಡಿ ಸಾಧಿಸಿ ತೋರಿಸಿ ಎಂದರು,

ಈ ಸಂದರ್ಭದಲ್ಲಿ ದುರದುಂಡಿ ಗ್ರಾಮ ಪಂಚಾಯತಿ ಆಡಳಿತ ಅಧಿಕಾರಿ ಗಣೇಶ ತೋಟಗಂಟಿ ಗ್ರಾಮ ಪಂಚಾಯತ್ ಮಾಜಿ ಸದಸ್ಯ ಬಿ.ಎಸ್. ಹುಕ್ಕೇರಿ, ಶಿಕ್ಷಕರಾದ ಉದಪ್ಪ ಮಾಕನ್ನವರ್, ಪುಂಡಲಿಕ ಪರೀಟ್, ಡಾ. ಎಸ್ ಎಸ್ ಪೂಜಾರಿ, ಚೇತನ್ ಕೋಳಿ, ಕಲ್ಲಪ್ಪ ಸಂಗೋಟಿ, ದುಂಡಪ್ಪ ಅಂತರಗಟ್ಟಿ ವಿಜಯ್ ಸೋಲಾಪುರ್, ಮುಖ್ಯ ಅಧ್ಯಾಪಕ ಗಣಪತಿ ಉಪ್ಪಾರ್, ಹಾಗೂ ಹಲವಾರು ಗಣ್ಯರು ಉಪಸ್ಥಿತರಿದ್ದರು ಆರಂಭದಲ್ಲಿ ಪ್ರಾಚಾರ್ಯ ಡಾ. ಎಸ್ ಎಸ್ ಹೂಗಾರ್ ಸ್ವಾಗತಿಸಿದರು. ಆಡಳಿತ ಅಧಿಕಾರಿ ಪ್ರಕಾಶ್ ಗರಗಟ್ಟಿ ಮಾತನಾಡಿದರು.

ಈ ಸಂದರ್ಭದಲ್ಲಿ ಎನ್‌ಎಸ್‌ಎಸ್ ಶಿಬಿರದಲ್ಲಿ ಸಹಾಯ ಮಾಡಿದ ದುರದುಂಡಿ ಗ್ರಾಮದ ಗಣ್ಯರನ್ನು ವಿದ್ಯಾರ್ಥಿಗಳನ್ನು ಶಾಲು ಹೊದಿಸಿ ಕಾಣಿಕೆ ನೀಡಿ ಸತ್ಕರಸಿ ಗೌರವಿಸಿದರು. ಕಾಲೇಜಿನ ಎಲ್ಲ ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತ ರಿದ್ದು. ಸವಿತಾ ಮಸರಗುಪ್ಪಿ ನಿರೂಪಿಸಿ ದರು, ಎನ್‌ಎಸ್‌ಎಸ್ ಯೋಜನಾಧಿ ಕಾರಿಯದ ಲಕ್ಕಪ್ಪ ಕುಮರೇಶಿ ವಂದಿಸಿದರು

# ಲಿಂಗಾಯತ ಸಂಘಟನೆ ವತಿಯಿಂದ ಮಹಾಪೌರ ಮತ್ತು ಉಪ ಮಹಾಪೌರರಿಗೆ ಸನ್ಮಾನ

## ಕಾಯಕವೇ ಕೈಲಾಸ ತತ್ವದಂತೆ ಬೆಳಗಾವಿ ಸಮಗ್ರ ಅಭಿವೃದ್ಧಿಗೆ ಶ್ರಮಿಸುವೆ: ಮಹಾಪೌರ ಪ್ರೀತಿ ಕಾಮಕರ



ಬೆಳಗಾವಿ ವಾರ್ತೆ

**ಬೆಳಗಾವಿ:** ಸರ್ವರ ಆಶಯದಂತೆ ಜಾತಿ, ಭಾಷೆ, ಧರ್ಮ, ಭೇದಭಾವ ತೊರೆದು ಬಸವಣ್ಣವರ ಕಾಯಕ ತತ್ವದಡಿಯಲ್ಲಿ ಬೆಳಗಾವಿಯ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸುವೆ. ಮೊದಲ ಬಾರಿ ಪಾಲಿಕೆ ಸದಸ್ಯೆಯಾಗಿ ಆಯ್ಕೆಯಾಗುವದರ ಜೊತೆಗೆ ಮೊದಲ ಪ್ರಯತ್ನದಲ್ಲಿ ಅತ್ಯಂತ ಜವಾಬ್ದಾರಿಯುತ ಮಹಾಪೌರ ಹುದ್ದೆ ನೀಡಿದ್ದು ಜವಾಬ್ದಾರಿಗೆ ತಕ್ಕಂತೆ ಸರ್ವರ ಸಹಾಯ,ಸಹಕಾರ ಮತ್ತು ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುವೆ ಎಂದು ನೂತನವಾಗಿ ಮಹಾಪೌರರಾಗಿ ಆಯ್ಕೆಯಾದ ಪ್ರೀತಿ ಕಾಮಕರ ರಂದು ಬೆಳಗಾವಿಯ ಹಳಕಟ್ಟಿ ಭವನದಲ್ಲಿ ಲಿಂಗಾಯತ ಸಂಘಟನೆ ವತಿಯಿಂದ ಹಮ್ಮಿಕೊಳ್ಳಲಾದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಉಪಮಹಾಪೌರರಾಗಿ ಆಯ್ಕೆಯಾದ ಹನುಮಂತ ಕೊಂಗಾಲಿ ಸನ್ಮಾನ ಸ್ವೀಕರಿಸಿ ಮಾತನಾಡಿ ಕೊಟ್ಟಿರುವ ಜವಾಬ್ದಾರಿಯನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡುವ ಮೂಲಕ ಬೆಳಗಾವಿ ನಗರದ ಅಭಿವೃದ್ಧಿಗೆ ಶ್ರಮಿಸುವೆ ಎಂದರು. ಅಧ್ಯಕ್ಷತೆ ವಹಿಸಿದ್ದ ಲಿಂಗಾಯತ ಸಂಘಟನೆ ಅಧ್ಯಕ್ಷ ಈರಣ್ಣ ದೇಯನ್ನವರ ಮಾತನಾಡಿ ಬೆಳಗಾವಿ ಇತಿಹಾಸದಲ್ಲಿ ಮೊದಲ ಬಾರಿ ಇಬ್ಬರು ಕನ್ನಡಿಗರು ಪ್ರಥಮ ಪ್ರಜೆಗಳಾಗಿ ಆಯ್ಕೆಯಾದದ್ದು ಹರ್ಷ ತಂದಿದೆ. ಸಮಗ್ರ ಸಮುದಾಯದಗಳ ಆಶೋತ್ತರಗಳಿಗೆ ಸ್ಪಂದಿಸುವ ಕೆಲಸ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಶಶಿಭೂಷಣ ಪಾಟೀಲ, ಬಿ. ಪಿ. ಜೇವಣಿ, ಶಿವಾನಂದ ನಾಯಕ, ಶಿವಾನಂದ ತಲ್ಲೂರ, ಎಂ ವೈ ಮೆಣಸಿನಕಾಯಿ, ಶ್ರೀದೇವಿ ನರಗುಂದ ಮಹಾದೇವಿ ಅರಳಿ,ವಿಜಯ ಹುದಲಿಮಠ, ಬಸವರಾಜ ಬಿಜ್ಜರಗಿ, ಆನಂದ ಕರ್ಕಿ, ಸುನಿಲ ಸಾಣಿಕೊಪ್ಪ ಶಂಕ್ರಪ್ಪ ಮೆಣಸಿಗಿ ಲಕ್ಷ್ಮಿಕಾಂತ ಗುರವ ಸುಶೀಲಾ ಗುರವ್ ಸೇರಿದಂತೆ ಸಂಘಟನೆಯ ಸದಸ್ಯರು ಮತ್ತು ಶರಣರು ಉಪಸ್ಥಿತರಿದ್ದರು ಕಾರ್ಯಕ್ರಮದ ಆರಂಭದಲ್ಲಿ ಮಹಾದೇವಿ ಅರಳಿ ಸ್ವಾಗತಿಸಿದರು ಸತೀಶ ಪಾಟೀಲ ಪರಿಚಯಿಸಿದರು ಸಂಗಮೇಶ ಅರಳಿ ನಿರೂಪಿಸಿದರು ಸುರೇಶ ನರಗುಂದ ವಂದಿಸಿದರು.



ಗೋಕಾಕ: ಕನ್ನಡದ ಖ್ಯಾತ ನಟಿ ಪ್ರೇಮಾ ಅವರು ಇಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರ ಗೋಕಾಕ ನಗರದಲ್ಲಿರುವ ಹಿಲ್ ಗಾರ್ಡನ್ ಮನೆಗೆ ಭೇಟಿ ನೀಡಿ ಸೌಜನ್ಯಯುತವಾಗಿ ಮಾತುಕತೆ ನಡೆಸಿದರು.

ಖ್ಯಾತ ನಟಿ ಪ್ರೇಮಾ ಅವರು ಗೋಕಾಕಗೆ ಆಗಮಿಸಿದ್ದ ಸಂದರ್ಭದಲ್ಲಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಕೇವಲ ಸೌಜನ್ಯಯುತ ಭೇಟಿಯಾಗಿದ್ದು, ಯಾವುದೇ ವಿಶೇಷ, ರಾಜಕೀಯ ಉದ್ದೇಶವಿಲ್ಲ, ಸಿನಿಮಾ ರಂಗದ ಇತ್ತೀಚಿನ ಬೆಳವಣಿಗೆಗಳು ಮತ್ತು ಸಾಮಾಜಿಕ ಕಾರ್ಯಗಳ ಬಗ್ಗೆ ಪರಸ್ಪರ ಮಾತುಕತೆ ನಡೆಸಿದ್ದಾರೆ ಎಂದು ಸಚಿವರ ಆಪ್ತ ಸಹಾಯಕರು ತಿಳಿಸಿದ್ದಾರೆ.



ಗೋಕಾಕ – ಸಂಕೇಶ್ವರ–ಯರಗಟ್ಟಿ ರಾಜ್ಯ ಹೆದ್ದಾರಿಯ ಘಟಪ್ರಭಾ ಪಟ್ಟಣದ ಸಮೀಪ, ಘಟಪ್ರಭಾ ಕೆನಾಲ್ ಗೆ ಅಡ್ಡಲಾಗಿ ನಿರ್ಮಾಣಗೊಳ್ಳುತ್ತಿರುವ ನೂತನ ನಾಲ್ಕು ಲೇನ್‌ಗಳ 18.5 ಮೀಟರ್ ಅಗಲದ ಸೇತುವೆ ಕಾಮಗಾರಿಯ ಪ್ರಗತಿಯನ್ನು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಇಂದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

# ಪರಮ ಪೂಜ್ಯ ಶ್ರೀ ಅರಟಾಳ ರುದ್ರಗೌಡರ ಜಯಂತಿ ಆಚರಣೆ

ಬೆಳಗಾವಿ ವಾರ್ತೆ

**ಹುಬ್ಬಳ್ಳಿ:** ಶಿಕ್ಷಣ ಪ್ರೇಮಿ, ಅಕ್ಷರದ ಗೌಡರು ಪರಮ ಪೂಜ್ಯ ಶ್ರೀ ಅರಟಾಳ ರುದ್ರಗೌಡರ ಜಯಂತಿಯ ನಿಮಿತ್ತ ಧಾರವಾಡ ಕರ್ನಾಟಕ ಕಾಲೇಜು ಆವರಣ ದಲ್ಲಿರುವ ಕೆ.ಎಲ್.ಇ ಸಂಸ್ಥೆ, ಕರ್ನಾಟಕ ಕಾಲೇಜು, ಮುಂತಾದ ಶಿಕ್ಷಣ ಸಂಸ್ಥೆಗಳ ಸ್ಥಾಪಕಕ್ಕೆ ಕಾರಣಿಕರ್ತರಾದ ರಾವಬಹದ್ದೂರ ಅರಟಾಳ ರುದ್ರಗೌಡರ ಅವರ ಪ್ರತಿಮೆಗೆ ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ, ಬಸವ ಪರಿಸರ ಸಂರಕ್ಷಣಾ ಸಮಿತಿಯ ವತಿಯಿಂದ ಮಾಲಾರ್ಪಣೆ ಮಾಡಿ ಶ್ರದ್ಧಾ, ಭಕ್ತಿಯಿಂದ ಗೌರವ ನಮನ ಸಲ್ಲಿಸಲಾಯಿತು. ಸೋಹ ನ ಸುರೇಶ ಹೊರಕೇರಿ, ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಪಂಚಮ ಸಾಲಿ ಸಂಘದ ಧಾರವಾಡ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷ ಪ್ರೊ ಲಲಿತಾ ಮಲ್ಲಿಕಾರ್ಜುನ ಪಾಟೀಲ, ನಿವೃತ್ ಗ್ರಂಥಪಾಲಕ ಸಿದ್ಧಯ್ಯ ಹಿರೇಮಠ, ಗ್ರಂಥಪಾಲಕ ಮಾರುತಿ ಎಂ. ತಲಗೇರಿ, ರೇಣುಕಾ ಶಿರಗುಂಬಿ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ ಕಾರ್ಯದರ್ಶಿ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಘಟಕದ ಉಪಾಧ್ಯಕ್ಷ, ಕರ್ನಾಟಕ ವಚನ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ, ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ, ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ, ಅನ್ನಪೂರ್ಣಾ, ದಿವ್ಯಶ್ರೀ , ಶ್ರೀದೇವಿ , ಅನುಶ್ರೀ, ಅಜಿತ , ಮುಂತಾದವರು ಇದ್ದರು. ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ, ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ ಅವರು ಮಾತನಾಡಿ ಶ್ರೀ ಅರಟಾಳ ರುದ್ರಗೌಡರ ಅವರ ಬದುಕು, ಸಾಧನೆ, ಶಿಕ್ಷಣ ರಂಗದಲ್ಲಿ ಮಾಡಿದ ಕ್ರಾಂತಿ ಕುರಿತು ಮಾತನಾಡಿದರು. ಲಿಂಗಾಯತರ ಕಣ್ಮಣಿ, ಅಕ್ಷರ ದಾಸೋಹಿ, ನ್ಯಾಯ ನಿಷ್ಠುರಿ ಅಧಿಕಾರಿಯಾಗಿದ್ದರು. ಉತ್ತರ ಕರ್ನಾಟಕದ ಕೊಟ್ಯಾಂತರ ಮಕ್ಕಳ ಶಿಕ್ಷಣಕ್ಕೆ ದಾರಿ ತೋರಿದವರು. ಯಾವುದೇ ಧರ್ಮ ಬೇಧ ಇಲ್ಲದೆ ಕರ್ನಾಟಕ ವಿಶ್ವವಿದ್ಯಾಲಯ, ಕರ್ನಾಟಕ ಕಾಲೇಜು, ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಗಳು ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಿವೆ.



ಅರಟಾಳ ರುದ್ರಗೌಡರು ಉತ್ತರ ಕರ್ನಾಟಕದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ ದಾಸೋಹಿಗಳು. ಕರ್ನಾಟಕ ಕಾಲೇಜು, ಕರ್ನಾಟಕ ವಿಶ್ವವಿದ್ಯಾಲಯ, ಕೆ.ಎಲ್.ಇ ಸಂಸ್ಥೆಗಳನ್ನು ಸ್ಥಾಪಿಸಲು ಮೂ ಲ ಕಾರಣ ಕರ್ತರು.ಲಿಂಗಾಯತ ಬಡ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಲು ಅನುಕೂ ಲ ಮಾಡಿಕೊಟ್ಟ ಮಹಾನ್ ವ್ಯಕ್ತಿ ಅವರೆಂದು ಹೇಳಿದರು.

# ನವೋದಯ ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ



ಕೃತಿಕೇಶ



ಶ್ರೇಯಸ್



ಮಂಥನಗೌಡ



ಪ್ರದೀಪ

ಧಾರವಾಡ: ಜವಾಹರ ನವೋದಯ ವಸತಿ ಶಾಲೆಗಳ 2026– 27ನೇ ಸಾಲಿನ ಪ್ರವೇಶ ಪೂರ್ವ ಪರೀಕ್ಷೆಯಲ್ಲಿ ನಗರದ ಎಕ್ಸ್‌ಲೈಂಟ್ ಕೋಚಿಂಗ್ ಕ್ಲಾಸಿಸ್ ವಿದ್ಯಾರ್ಥಿ ಕೃತಿಕೇಶ ಹೊಂಗಲ (ಶೇ.97.50) ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾನೆ. ಶ್ರೇಯಸ್ ಅಂಗಡಿ (ಶೇ. 96.25), ಮಂಥನಗೌಡ ಪಾಟೀಲ (ಶೇ. 92.50), ಪ್ರದೀಪ ಡೋಕಣ್ಣವರ (ಶೇ. 85) ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಕೌಲಗಿ, ಸಂಸ್ಥಾಪಕ ನಿರ್ದೇಶಕ ಪ್ರವೀಣ ಗಿರಿಯಪ್ಪನವರ, ಸಂ ಸ್ಥಾಪಕ ಕಾರ್ಯದರ್ಶಿ ಭುವನ್ ಕೌಲಗಿ ಹಾಗೂ ಬೋಧಕ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

# "ಪ್ರತಿಭಾ ಪುರಸ್ಕಾರ"ಹಾಗೂ ಬೀಳ್ಕೊಡುಗೆ ಸಮಾರಂಭ

## ತಾಯಿ–ತಂದೆ, ಕಲಿಸಿದ ಗುರುವಿನ ಋಣ ತೀರಿಸಲು ಸುಜ್ಞಾನಿಗಳಾಗಿ : ಡಾ ಎಸ್ ಬಿ ಹಲಸಗಿ



ಬೆಳಗಾವಿ ವಾರ್ತೆ

**ಹೂಲಿಕಟ್ಟಿ :** ಬೆಳಗಾವಿ ಜಿಲ್ಲೆಯ ಚಕಿತ್ತೂರು ತಾಲ್ಲೂಕಿನ ಹೂಲಿಕಟ್ಟಿ ಕೆ ಪಿ ಮೋಕಾಶಿ ಸರಕಾರಿ ಪ್ರೌಢ ಶಾಲೆಯಲ್ಲಿ 2025–26 ನೆ ಸಾಲಿನ ಪ್ರತಿಭಾ ಪುರಸ್ಕಾರ ಹಾಗೂ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಎಸ್ ಡಿ ಎಂ ಸಿ ಅಧ್ಯಕ್ಷರಾದ ನಿಂಗಪ್ಪಣ್ಣ ಮೋಕಾಶಿ ಯವರ ಅಧ್ಯಕ್ಷತೆಯಲ್ಲಿ ಜರುಗಿತು. ಅಥಿತಿಗಳಾಗಿ ಬಸಲಿಂಗಣ್ಣ ಶಾಹಾಪೂರ, ಜಗದೀಶ ಹಿರೇಮಠ, ಪಾಟೀಲ ಶ್ರೀಮತಿ ಕುಲಕರ್ಣಿ ಪಾಲ್ಗೊಂಡಿದ್ದರು ಮುಖ್ಯ ಶಿಕ್ಷಕ ಜಿ ಎಚ್ ನಾಯ್ಕ, ರವರು ಕಳೆದ ಸಾಲಿನಲ್ಲಿ ಪರೀಕ್ಷೆಯಲ್ಲಿ ಉತ್ತಮವಾದ ಅಂಕ ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದ ಕುಮಾರ ನಂದನ ಮಣ್ಣಿಕೇರಿ, ವಿರೇಶ್ ಸವದತ್ತಿ, ವರುಣ ಗೌಡರ, ರವರಿಗೆ ವಿವಿಧ ದಾನಿಗಳಿಂದ ಹಾಗು ಶಿಕ್ಷಕರ ಮಕ್ಕಳ ಕಲ್ಯಾಣ ನಿಧಿಯ ನಗದು ಬಹುಮಾನ,ಪಾರೀತೋಷಕ ನೀಡಿ ಗೌರವಿಸಲಾಯಿತು ಪ್ರತಿಯೊಂದು ವಿಷಯದಲ್ಲಿ ಅತಿ ಹೆಚ್ಚು. ಅಂಕ ಪಡೆದ ವಿದ್ಯಾರ್ಥಿಗಳಿಗೆ ನಗದು. ಬಹುಮಾನ ವಿಷಯ ಶಿಕ್ಷಕರು ಹಾಗೂ ದತ್ತಿ ಬಹುಮಾನ ನೀಡಲಾಯಿತು.

ಇಂಗ್ಲಿಷ್ ವಿಷಯದಲ್ಲಿ ಕಳೆದ ಸಾಲಿನಲ್ಲಿ 90 ಕ್ಕಿಂತ ಹೆಚ್ಚು ಅಂಕ ಪಡೆದ ವಿರೇಶ, ಹಾಗೂ ನಂದನ್, ವರುಣ್, ಇವರಿಗೆ ಪ್ರೋತ್ಸಾಹ ದಾಯಕವಾಗಿ ಇಂಗ್ಲಿಷ್ ವಿಷಯ ಶಿಕ್ಷಕರು ಹಾಗೂ ಕಿತ್ತೂರು ತಾಲೂಕಾ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದ ತಾಲೂಕಾ ಅಧ್ಯಕ್ಷರಾದ ಡಾ ಸೋಮಶೇಖರ ಹಲಸಗಿ ಯವರು ಪ್ರತಿಯೊಬ್ಬರಿಗೂ ತಲಾ. 500/– ರೂಪಾಯಿ ನಗದು ಬಹುಮಾನ ನೀಡಿ, ಮಾತನಾಡುತ್ತ ಕಲಿತು ಶಾಲೆ., ಕಳಿಸಿದ ಗುರುಗಳು ಹಾಗೂ ಈ ಶಾಲೆಯ ಭೂಮಿ ದಾನ ಮಾಡಿ ಗ್ರಾಮಾಂತರ ಪ್ರದೇಶದಲ್ಲಿ ಪ್ರೌಢ ಶಾಲೆ ಆರಂಭಕ್ಕೆ ಕಾರಣಿ ಕರ್ತರಾದ ಮಹನೀಯರನ್ನು ಹಾಗೂ ಹೆತ್ತ ತಂದೆ ತಾಯಿ ಯಾರನ್ನು ಜೀವನದಲ್ಲಿ ಸ್ಮರಿಸಿಕೊಂಡು ಸಂಸ್ಕಾರಯುತ, ಸನ್ನಡತೆಯ ವಿದ್ಯಾರ್ಥಿಗಳಾಗಿ ಸುಂದರ ಬದುಕು ಕಟ್ಟಿಕೊಳ್ಳಲು ತಾವೆಲ್ಲರೂ ನಿರಂತರ ಅಧ್ಯಯನದಲ್ಲಿ ತೊಡಗಿಸಿ ಕೊಳ್ಳುವಂತೆ ಕರೆ. ನೀಡಿದರು.. 2026ನೆ. ಸಾಲಿನ ಆದರ್ಶ ವಿದ್ಯಾರ್ಥಿ ಗಳಾಗಿ ಕುಮಾರ ಶಿವರಾಜ್ ಲೋಕುರ, ಕುಮಾರಿ ಲಕ್ಷ್ಮೀ ಕಿರೋಜಿ, ಆಯ್ಕೆ. ಯಾಗಿದ್ದು ಉಪಸ್ಥಿತರಿದ್ದ ಅಥಿತಿಗಳು ಅವರನ್ನು ಗೌರವಿಸಿ ಸನ್ಮಾನಿಸಿದರು, ವಿದ್ಯಾರ್ಥಿಗಳ ಪರವಾಗಿ ಸಾಹಿಲ್ ಹವಾಲ್ದಾರ್ ಕುಮಾರಿ ಸ್ಫೂರ್ತಿ ಗೌಡರ, ಅಂಕಿತಾ ಪತ್ತಾರ, ಎಸ್ ಎಸ್ ಹಿರೇಮಠ, ಕೆ ಎ ಕದ್ದು. ರವರು ಮಾತನಾಡಿದರು, ಹಿರಿಯ. ಶಿಕ್ಷಕರ ರಾದ ಶ್ರೀಮತಿ. ಎ ಎಸ್ ಅಡಕಿ, ಶ್ರೀಮತಿ ರಾಧಾಭಾಯಿ ಬಾಗಲಕೋಟ, ಬಿ ಎಸ್ ಪಾಟೀಲ, ಉಪಸ್ಥಿತರಿದ್ದರು ಪ್ರಾರಂಭದಲ್ಲಿ ಮಕ್ಕಳಿಂ ದ ಪ್ರಾರ್ಥನೆ ಜರುಗಿತು, ಶ್ರೀಮತಿ ಲಕ್ಷ್ಮೀ ಕಣಬರಗಿ ಯವರ ಸ್ವಾಗತಿಸಿದರು ವಂದೇ ಮಾತರಂ ಗೀತೆಯೊಂದಿಗೆ ದೀಪ ದಾನ ಮಾಡುವ ಮೂಲಕ ಕಾರ್ಯಕ್ರಮ ಯಶಸ್ವಿ ಯಾಗಿ ಜರುಗಿತು.

# 51 ಮೊಬೈಲ್ ಫೋನ್‌ಗಳ ಪತ್ತೆ; ವಾರಸುದಾರರಿಗೆ ಹಸ್ತಾಂತರ



ಬೆಳಗಾವಿ ವಾರ್ತೆ

**ಬೆಳಗಾವಿ:** ಮೊಬೈಲ್ ಕಳೆದುಕೊಂಡು ಕಂಗಾಲಾಗಿದ್ದ ಸಾರ್ವಜನಿಕರ ಮುಖದಲ್ಲಿ ಇಂದು ಮಂದಹಾಸ ಮೂಡಿದೆ. ಬೆಳಗಾವಿ ಸೈಬರ್ ಕ್ರೈ ಪೊಲೀಸ್‌ರ ತಂಡದ ಪೊಲೀಸರು ವಿವಿಧ ಸಂದರ್ಭಗಳಲ್ಲಿ ಕಳೆದುಹೋಗಿದ್ದ ಹಾಗೂ ಕಳ್ಳತನವಾಗಿದ್ದ ದುಬಾರಿ ಫೋನ್‌ಗಳು ಸೇರಿದಂತೆ ಹಲವು ಬ್ರಾಂಡ್‌ಗಳ ಮೊಬೈಲ್‌ಗಳು ಸೇರಿದಂತೆ ಒಟ್ಟು 51 ಮೊಬೈಲ್ ಫೋನ್‌ಗಳನ್ನು ಪೊಲೀಸರು ಯಶಸ್ವಿಯಾಗಿ ಪತ್ತೆಹಚ್ಚಿ, ವಾರಸುದಾರರಿಗೆ ಇಂದು ಹಸ್ತಾಂತರಿಸಲಾಗುತ್ತಿದೆ ಎಂದು ಬೆಳಗಾವಿ ವರಿಷ್ಠಾಧಿಕಾರಿ ಕೆ ರಾಮರಾಜನ್ 'ಪತ್ರಿಕಾಗೋಷ್ಠಿ'ಯಲ್ಲಿ ಇಂದು ತಿಳಿಸಿದರು.

ತಂತ್ರಜ್ಞಾನದ ನೆರವಿನಿಂದ ಪತ್ತೆ: ಈ ಕಾರ್ಯಾಚರಣೆಯಲ್ಲಿ CEIR (Central Equipment Identity Register) ಪೋರ್ಟಲ್ ಪ್ರಮುಖ ಪಾತ್ರ ವಹಿಸಿದೆ. ಕಳೆದುಹೋದ ಮೊಬೈಲ್‌ಗಳ IMEI ಸಂಖ್ಯೆಗಳನ್ನು ಈ ಪೋರ್ಟಲ್‌ನಲ್ಲಿ ದಾಖಲಿಸುವ ಮೂಲಕ, ತಾಂತ್ರಿಕ ವಿಶ್ಲೇಷಣೆಯ ನಡೆಸಿ ಅತಿ ಕಡಿಮೆ ಸಮಯದಲ್ಲಿ ಈ ಫೋನ್‌ಗಳನ್ನು ಪತ್ತೆಹಚ್ಚಲಾಗಿದೆ. ಕಳೆದುಕೊಂಡ ಹಾಗೂ ಕಳ್ಳತನ ಮಾಡಿರುವ ಮೊಬೈಲಗಳನ್ನು ಬೇರೆಯೊಬ್ಬರು ಬಳಕೆ ಮಾಡುತ್ತಿರುವಾಗ ನಮ್ಮ ಸೈಬರ್ ಕ್ರೈ ಪೊಲೀಸ್‌ರ ತಂಡ ವಯಕ್ತಿಕವಾಗಿ ಕಾಲ್ ಮಾಡಿ ಎಲ್ಲ ಮೊಬೈಲ್ ಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ ಎಂದು ತಿಳಿಸಿದರು. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಕಾರ್ಯಾಚರಣೆ: ಬೆಳಗಾವಿಗೆ ಬರುವ ಐದು ಸಬ್ ಡಿವಿಜನ್‌ಗಳಾದ ಅಥಣಿ, ಚಿಕ್ಕೋಡಿ, ಗೋಕಾಕ, ಬೈಲಹೊಂಗಲ, ರಾಮದುರ್ಗ ತಾಲೂಕುಗಳಲ್ಲಿ ಕಳೆದುಹೊದ ಹಾಗೂ ಕಳ್ಳತನ ಮಾಡಿರುವ ಮೊಬೈಲ್ ಗಳನ್ನು ವಾರಸುದಾರರಿಗೆ ಹಸ್ತಾಂತರಿಸಲಾಗಿದೆ. 2023ರಿಂದ ಇಲ್ಲಿಯವರೆಗೆ ಒಟ್ಟು 4744 ಮೊಬೈಲ್ ಕಳೆದುಹೊಗಿರುವ ಕುರಿತು ಅಇಖಖ ದಲ್ಲಿ ದಾಖಲಾಗಿದೆ. ಅದರಂತೆ ನಾವುಗಳು ಒಟ್ಟು 1 ಸಾವಿರ ಮೊಬೈಲ್ ಗಳನ್ನು ವಶಕ್ಕೆ ಪಡೆದು ಮೊಬೈಲ್ ಮಾಲೀಕರಿಗೆ ಹಸ್ತಾಂತರಿಸಲಾಗಿದೆ. ಬರುವ ದಿನಗಳಲ್ಲಿ 3744 ಮೊಬೈಲ ಗಳನ್ನು ಪತ್ತೆ ಹಚ್ಚುವ ಕಾರ್ಯ ಪ್ರಾರಂಭಿಸಲಾಗಿದೆ ಎಂದು ಎಸ್ಪಿ ಕೆ ರಾಮರಾಜನ್ ತಿಳಿಸಿದರು. ಸೈಬರ್ ಕ್ರೈ ಪೊಲೀಸ್‌ರ ತಂಡಕ್ಕೆ ಶ್ಲಾಘಸಿದ ಎಸ್ಪಿ :ಸೈಬರ್ ಕ್ರೈ ಡಿವೈಎಸ್ ಪಿ ವೀರೇಶ ದೊಡಮನಿ ನೇತೃತ್ವದಲ್ಲಿ ಅವರ ತಂಡದ ಪೊಲೀಸರಿಗೆ ಹಾಗೂ ಸಿಬ್ಬಂದಿಗಳ ಶ್ರಮವನ್ನು ಬೆಳಗಾವಿ ವರಿಷ್ಠಾಧಿಕಾರಿ ರಾಮರಾಜನ್ ಶ್ಲಾಘಿಸಿದರು. ಅಲ್ಲದೇ ಕಳೆದುಕೊಂಡ ಹಾಗೂ ಕಳ್ಳತನ ಮಾಡಿರುವ ಮೊಬೈಲ್ ಸಿಗುವ ಭರವಸೆಯೇ ಇರಲಿಲ್ಲ, ಆದರೆ ಬೆಳಗಾವಿ ಪೊಲೀಸರ ಈ ಕಾರ್ಯಕ್ಷಮತೆ ನಮಗೆ ಆಶ್ಚರ್ಯ ಮತ್ತು ಸಂತಸ ತಂದಿದೆ ಎಂದು ಮೊಬೈಲ್ ಮರಳಿ ಪಡೆದ ವಾರಸುದಾರರು ಅಧಿಕಾರಿಗಳ ಮುಂದೆ ಹರ್ಷ ವ್ಯಕ್ತಪಡಿಸಿದ್ದಾರೆ. ಈ ವೇಳೆ ಸೈಬರ್ ಕ್ರೈ ಡಿವೈಎಸ್ ಪಿ ವೀರೇಶ ದೊಡಮನಿ ಸೇರಿದಂತೆ ಎಲ್ಲ ಸೈಬರ್ ಕ್ರೈ ಸಿಬ್ಬಂದಿಗಳು ಇದ್ದರು.




# ಬೆಳಗಾವಿಯಲ್ಲಿ ಭವ್ಯವಾಗಿ ಆರಂಭಗೊಂಡ ಗಾಲ್ಫ್ ಸ್ಪರ್ಧೆ

## ಆಲೀವ್ ಗ್ರೀನ್ಸ್ ಗಾಲ್ಫ್ ಲೀಗ್ ಸೀಜನ್ 1ರ ಅದ್ದೂರಿ ಆರಂಭ

ಬೆಳಗಾವಿ ವಾರ್ತೆ

**ಬೆಳಗಾವಿ :** ನಗರದ ಆಲಿವ್ ಗ್ರೀನ್ಸ್ ಗಾಲ್ಫ್ ಕೋರ್ಸ್‌ನಲ್ಲಿ ಅಲೀವ್ ಗ್ರೀನ್ಸ್ ಗಾಲ್ಫ್ ಲೀಗ್ ಸೀಜನ್ 1ರ ಉದ್ಘಾಟನಾ ಸಮಾರಂಭವು ಅತೀ ಅದ್ದೂರಿಯಾಗಿ ಜರುಗಿದೆ. ಗಾಲ್ಫ್ ಲೀಗ್ ಸೀಜನ್ 1ರ ಈ ಕ್ರೀಡಾ ಸ್ಪರ್ಧೆಯು ನಗರದ ಕ್ರೀಡಾ ಕ್ಯಾಲೆಂಡರ್‌ನಲ್ಲಿ ಒಂದು ರೋಮಾಂಚಕಾರಿ ಹೊಸ ಅಧ್ಯಾಯದ ಆರಂಭವನ್ನು ಸೂಚಿಸಿದಂತೆ ಕಾಣುತ್ತಿತ್ತು.

ಲೀಗ್‌ನಲ್ಲಿ ಪ್ರಮುಖ ಸ್ಥಳೀಯ ಮಾಲೀಕರ ನೇತೃತ್ವದ ಎಂಟು ತಂಡಗಳಿವೆ: ಮಿಹಿರ್ ಪೋತ್‌ದಾರ್ ಫಿಖ (ಶ್ರೀ ಮಿಹಿರ್ ಪೋತ್‌ದಾರ್), ಡೈನಾಮಿಕ್ ಸಿಲ್ವರ್‌ಬಿಲ್ ಖೋತ (ಶ್ರೀ ಶ್ರೀಶೈಲ್ ಖೋತ ), ರಾಯಲ್ ಕಿಂಗ್ಸ್ (ಶ್ರೀ ರಾಜೇಶ್ ಕಾಂಬ್ಳೆ), ಕ್ಲೌಡ್ 9 ಟೈಗರ್ಸ್ (ಡಾ ಅರುಣ್ ಕಿಲ್ಲೇಕರ್), ಖಃಉ ವಾರಿಯರ್ಸ್ (ಶ್ರೀ ರಾಜ್ ಘಾಟ್ಗೆ), ಯೂನಿವರ್ಸಲ್ ಈಗಲ್ಸ್ (ಶ್ರೀ ಆದರ್ಶ ಗುಲಾಬಾನಿ ಮತ್ತು ಶ್ರೀ ಸುಮುಖ್ ಚಾಬ್ರಿಯಾ), ಆದಿತ್ಯ ಎಲೈಟ್ ಚಾಂಪಿಯನ್ಸ್ (ಶ್ರೀ ಸಚಿನ್ ಉಸಾಲ್ಕರ್), ಮತ್ತು ದಿ ಮಾಸ್ಟರ್ಸ್ (ಕರ್ನಲ್ ಮೋಹನ್ ನಾಯಕ್ ಮತ್ತು ಶ್ರೀ ಅಭಯ್ ಕುಲಕರ್ಣಿ).

ಪಂದ್ಯಾವಳಿಯು ವಿದ್ಯುಕ್ತವಾಗಿ ಗುಂಡೇಟಿನ ಆರಂಭ'ದೊಂದಿಗೆ ಪ್ರಾರಂಭವಾಯಿತು, ನಂತರ ನಾಲ್ಕು ಬಾಲ್ ಸ್ವರೂಪದಲ್ಲಿ ಒಂದನೇ ಸುತ್ತು ನಡೆಯಿತು. ಪಂದ್ಯಕ್ಕೂ ಮುನ್ನ, ಆಲಿವ್ ಗ್ರೀನ್ಸ್ ಗಾಲ್ಫ್ ಕೋರ್ಸ್‌ನ ಅಧ್ಯಕ್ಷರು ಸಮಾರಂಭವನ್ನು ಉದ್ದೇಶಿಸಿ ಮಾತನಾಡುತ್ತಾ, ಈ ಪ್ರದೇಶದಲ್ಲಿ ಗಾಲ್ಫ್‌ನ ಬೆಳವಣಿಗೆಯನ್ನು ವಿವರಿಸಿದರು ಮತ್ತು ಭವಿಷ್ಯದ ಆವೃತ್ತಿಗಳಲ್ಲಿ ಗೋವಾ ಮತ್ತು ಕೊಲ್ಹಾಪುರದ ತಂಡಗಳನ್ನು ಆಹ್ವಾನಿಸುವ ಯೋಜನೆಯನ್ನು ವ್ಯಕ್ತಪಡಿಸಿದರು.

ಬೆಳಗಾವಿ ಮತ್ತು ಹತ್ತಿರದ ಪ್ರದೇಶಗಳಿಂದ ಒಟ್ಟು 90 ಗಾಲ್ಫ್ ಆಟಗಾರರು ಲೀಗ್‌ನಲ್ಲಿ ಭಾಗವಹಿಸುತ್ತಿದ್ದಾರೆ. ಮೊದಲ ಸುತ್ತಿನ ನಂತರ, ಕ್ಲೌಡ್ 9 ಟೈಗರ್ಸ್ 33.5 ಅಂಕಗಳೊಂದಿಗೆ ಲೀಡರ್ ಬೋರ್ಡ್‌ನಲ್ಲಿ ಮುನ್ನಡೆ ಸಾಧಿಸಿದರೆ, ದಿ ಮಾಸ್ಟರ್ಸ್ ಮತ್ತು ರಾಯಲ್ ಕಿಂಗ್ಸ್ ತಲಾ 30 ಅಂಕಗಳೊಂದಿಗೆ ನಂತರದ ಸ್ಥಾನದಲ್ಲಿವೆ. ಡೈನಾಮಿಕ್ ಸಿಲ್ವರ್‌ಬಿಲ್ ಸ್ಟಾರ್ 20, ಯೂನಿವರ್ಸಲ್ ಈಗಲ್ಸ್ 19, ಮಿಹಿರ್ ಪೋತ್ದಾರ್ ಫಿಖ 10, ಖಃಉ ವಾರಿಯರ್ಸ್ 8 ಮತ್ತು ಆದಿತ್ಯ ಎಲೈಟ್ ಚಾಂಪಿಯನ್ಸ್ 5 ಅಂಕಗಳನ್ನು ಗಳಿಸಿದ್ದಾರೆ.



ಲೀಗ್ ಅನ್ನು ವಿವಿಧ ಸ್ವರೂಪಗಳಲ್ಲಿ ಮೂರು ಸುತ್ತುಗಳಲ್ಲಿ ಆಡಲಾಗುವುದು, ಏಪ್ರಿಲ್ 5 ರಂದು ಗ್ರ್ಯಾಂಡ್ ಫಿನಾಲೆಯನ್ನು ನಿಗದಿಪಡಿಸಲಾಗಿದೆ. ಈ ಕಾರ್ಯಕ್ರಮವನ್ನು ಆಲಿವ್ ಗ್ರೀನ್ಸ್ ಗಾಲ್ಫ್ ಕೋರ್ಸ್‌ನ ಸದಸ್ಯರು ಮತ್ತು ಃಒಘ ಮತ್ತು ಟೊಯೋಟಾ ಸೇರಿದಂತೆ ಪ್ರಾಯೋಜಕರು ಬೆಂಬಲಿಸಿದ್ದಾರೆ.

# ಮೂಡಲಗಿ: ಸಡಗರ ಸಂಭ್ರಮದ ರಂಜಾನ್ ಆಚರಣೆ



ಬೆಳಗಾವಿ ವಾರ್ತೆ

**ಮೂಡಲಗಿ:** ಸಕಲ ಜೀವರಾಶಿಗಳನ್ನು ಪ್ರೀತಿಸುತ್ತ ದಯೆ,ಕರುಣೆ ಹೊಂದಿ ಯಾರ ಕೇಡನ್ನು ಬಯಸದೆ ಇರುವುದು ನಿಜವಾದ ಮನುಷ್ಯ ಧರ್ಮವಾಗಿದೆ ಎಂದು ಧರ್ಮ ಗುರುಗಳಾದ ಮೌಲಾನಾ ಮೊಹಮ್ಮದ್ ಶಫೀಕ್ ಆಜ್ಮಿ ಹೇಳಿದರು.

ಪಟ್ಟಣದ ಈದ್ಗಾ ಮೈದಾನದಲ್ಲಿ ಬಿಟಿಟಿ ಕಮಿಟಿ ನೇತೃತ್ವದಲ್ಲಿ ಹಾಗೂ ವಿವಿಧ ಕಮಿಟಿಗಳ ಸಹಕಾರದಲ್ಲಿ ಪವಿತ್ರ ರಂಜಾನ್ ಹಬ್ಬದ ಈದುಲ್ ಫಿತರನ ಸಾಮೂಹಿಕ ಪ್ರಾರ್ಥನೆಗೆ ಸೇರಿದ ಸರ್ವ ಬಾಂಧವರನ್ನು ಉದ್ದೇಶಿಸಿ ಮಾತನಾಡಿದ ಅವರು, ಪರೋಪಕಾರ, ಸಮಾನತೆ ಮತ್ತು ಸೌಹಾರ್ದತೆಯ ಧರ್ಮದ ನಿಜತೆಯನ್ನು ಅರಿತು ದ್ವೇಷ, ಅಸೂಯೆ ಬಿಟ್ಟು ಪರಸ್ಪರರು ಅನ್ಯೋನ್ಯತೆ ಹೊಂದಿ ಅಲ್ಲಾಹನ ಪ್ರೀತಿಗೆ ಪಾತ್ರರಾಗಬೇಕು ಎಂದು ಹಿತ ವಚನ ಹೇಳಿದರು.

ಸಾಮೂಹಿಕ ಪ್ರಾರ್ಥನೆ ಬಳಿಕ ಪರಸ್ಪರರು ಸಡಗರ ಸಂಭ್ರಮದಿಂದ ರಂಜಾನ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ಈ ವೇಳೆ ಅರಭಾವಿ ಜನಪ್ರೀಯ ಶಾಸಕ ಬಾಲಚಂದ್ರ ಜಾರಕಿಹೊಳಿ, ಸಚಿವ ಸತೀಶ ಜಾರಕಿಹೊಳಿ ಹಾಗೂ ಬೆಳಗಾವಿ ಶಾಸಕ ರಾಜು ಶೇಠ ಅವರು ಸಮಸ್ತ ಮುಸ್ಲಿಂ ಬಾಂಧವರಿಗೆ ರಂಜಾನ್ ಹಬ್ಬದ ಶುಭಾಶಯಗಳನ್ನು ಕೋರಿ ಶುಭ ಹಾರೈಸಿ ಕಳುಹಿಸಿದ ಪತ್ರವನ್ನು ಪುರಸಭೆ ಮಾಜಿ ಅಧ್ಯಕ್ಷ ಅಜೀಜ್ ಡಾಂಗೆ ಅವರು ಓದಿ ಹೇಳಿದರು.

ಮುಖಂಡರಾದ ಲಾಲಸಾಬ ಸಿದ್ದಾಪೂರ ಅವರು ರಂಜಾನ ಹಬ್ಬದ ಪ್ರಾರ್ಥನೆಗಾಗಿ ಸಹಕರಿಸಿದ ಸಿಪಿಐ , ಪಿಎಸ್‌ಐ , ಪುರಸಭೆ ಮುಖ್ಯಾಧಿಕಾರಿ ಮತ್ತು ಸಿಬ್ಬಂದಿ ಹಾಗೂ ಪೋಲೀಸ್ ಸಿಬ್ಬಂದಿ ವರ್ಗದವರಿಗೆ ಧನ್ಯವಾದಗಳನ್ನು ಹೇಳಿದರು.

ಈ ಸಂದರ್ಭದಲ್ಲಿ ಬಿಟಿಟಿ ಕಮಿಟಿಯ ಅಧ್ಯಕ್ಷ ಅನ್ವರ್ ನದಾಫ್, ಉಪಾಧ್ಯಕ್ಷ ಹುಸೇನ್ ಥರಥರಿ ಕಾರ್ಯದರ್ಶಿ ಬುಡನಸಾಬ ಡಾಂಗೆ, ಖಜಾಂಚಿ ಅಬ್ದುಲಗಫಾರ ಡಾಂಗೆ, ರಾಜು ಅತ್ತಾರ, ಮುಸ್ತಫಾ ತಾಂಬೋಳಿ, ಆದಮಸಾಬ ತಾಂಬೋಳಿ, ಶರೀಫ್ ಪಟೇಲ್ ಸುಲ್ತಾನಸಾಬ ಕಳ್ಳಿಮನಿ, ಹಸನ ಥರಥರಿ, ಅಬ್ದುಲಸಾಬ ಇನಾಮದಾರ, ದಾದು ಮುಗುಟಖಾನ, ಮಲೀಕ ಹುಣಶ್ಯಾಳ, ಹುಸೇನಸಾಬ ಶೇಖ, ನನ್ನುಸಾಬ ಶೇಖ, ಮಲೀಕ ಪಾಶ್ಚಾಪೂರ, ಲಾಲಸಾಬ ಸೈಯುದ್, ಸಾಕೀಬ್ ಪೀರಜಾದೆ, ಸಾಹೇಬ್ ಪೀರಜಾದೆ, ಕುತುಬುದ್ದೀನ ನೇಸರ್ಗಿ, ಸೇರಿದಂತೆ ಸಮಾಜದ ಅನೇಕ ಗಣ್ಯರು ಉಪಸ್ಥಿತರಿದ್ದರು.

# ರಂಜಾನ್ ಹಬ್ಬದ ಪ್ರಯುಕ್ತ ಈದ್ಗಾದಲ್ಲಿ ಪ್ರಾರ್ಥನೆ



ಬೆಳಗಾವಿ ವಾರ್ತೆ

**ಘಟಪ್ರಭಾ:** ಸ್ಥಳೀಯ ಮುಸ್ಲಿಂ ಸಮುದಾಯದ ಬಾಂಧವರು ರಂಜಾನ್ ಹಬ್ಬದ ಪ್ರಯುಕ್ತ ಈದ್ಗಾದಲ್ಲಿ ಪ್ರಾರ್ಥನೆ ಸಲ್ಲಿಸಿದರು.

ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಿ ಗಮನ ಸೆಳೆದರು. ಹಬ್ಬದ ಪ್ರಯುಕ್ತ ಮಸೀದಿಗಳನ್ನು ವಿದ್ಯುತ ದೀಪ ಗಳಿಂದ ಅಲಂಕರಿಸಲಾಗಿತ್ತು.

ಹಬ್ಬದ ಪ್ರಯುಕ್ತ ಸಮಾಜದ ಮುಖಂಡರು ಹಿರಿಯರು ಚಿಕ್ಕ ಮಕ್ಕಳು ಎಲ್ಲರೂ ಹೊಸ ಬಟ್ಟೆಗಳನ್ನು ಧರಿಸಿ ಮಸೀದಿಯಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ತಮ್ಮ ಬಂಧು-ಬಾಂಧವರು ಹಾಗೂ ಸ್ನೇಹಿತರೊಂದಿಗೆ ಮಸೀದಿ ಬಳಿ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ನಗರದ ಬೀದಿಗಳಲ್ಲಿ ನಡೆದ ಮೆರವಣಿಗೆಯಲ್ಲಿ ನೂರಾರು ಜನರು ಪಾಲ್ಗೊಂಡಿದ್ದರು. ನಗರದ ಜಾಮಿಯಾ ಮಸೀದಿಯಿಂದ ಆರಂಭಗೊಂಡ ಖಬರ ಸ್ಥಾನದವರಗೆ ಮೆರವಣಿಗೆಯಲ್ಲಿ ಸಮಾಜದ ಹಿರಿಯರು ಆದಂತ ಮದಾರಸಾಬ ಜಗದಾಳ.ಇಮಾಮಸಾಬ ಬಳಿಗಾರ್ ಮಹಮ್ಮದಸಾಬ ಕಡಲಗಿ. ಗುಡುಸಾಬ ಬಿಸ್ತಿ ರೆಹಮಾನ ಮೂಕಾಸಿ ಲಾಲಾಸಾಬ ಜಗದಾಳ ಮುನ್ನಾ ಮುಲ್ಲಾ ಮದಾರಸಾಬ ಬಳಿಗಾರ ಗೌಸಾಬ ಕೊತ್ವಾಲ ನೂರುದ್ದೀನ್ ಕೊತ್ವಾಲ ಪಜಲುಲ್ಲಾ ಶಾಯನ್ನವರ ರಮ್ಜಾನ್ ಅವಟಿ ಮೊಹಮ್ಮದ್ ಮಾಸ್ತಿ ಹೂಳಿ ಬುಡನಸಾಬ ಹೂಸುರ ಮೀರಾಸಾಬ ಬಳಿಗಾರ ಇಲಿಯಾಸ್ ಬಳಿಗಾರ್ ಮಲೀಕ ಸಾಬ ಸನದಿ ಶಬ್ಬೀರ್ ಜಮಖಂಡಿ. ಶಮ್ಮು ಭೂಜಗಾರ.ಪೀರಸಾಬ ಕಡಲಗಿ. ಧರ್ಮದ ಗುರುಗಳು. ಸೇರಿದಂತೆ ಸಮುದಾಯದ ಮುಖಂಡರು ರಮಜಾನ್ ಹಬ್ಬದಲ್ಲಿ ಪಾಲ್ಗೊಂಡಿದ್ದರು.

# ಗುಬ್ಬಚ್ಚಿ ಮನುಷ್ಯ ಸ್ನೇಹಿ ಪಕ್ಷಿ – ಪ್ರೊ. ವೇದಾ ದೇಶಪಾಂಡೆ

ಬೆಳಗಾವಿ ವಾರ್ತೆ

**ಮೂಡಲಗಿ:** ಗುಬ್ಬಚ್ಚಿ ಮನುಷ್ಯ ಸ್ನೇಹಿ ಪಕ್ಷಿ ಅವು ಅನಾದಿ ಕಾಲದಿಂದಲೂ ಮನುಷ್ಯನ ವಾಸಸ್ಥಾನದ ಪರಿಸರದಲ್ಲೇ ಜೀವಿಸುತ್ತವೆ. ಆದ್ದರಿಂದ ಅಳಿವಿನಂಚಿನಲ್ಲಿರುವ ಗುಬ್ಬಚ್ಚಿ ಸಂತತಿ ಉಳಿವಿಗೆ ಎಲ್ಲರೂ ಕೈಜೋಡಿಸಬೇಕೆಂದು ವಾಣಿಜ್ಯ ಶಾಸ್ತ್ರಪ್ರಾಧ್ಯಾಪಕಿ ಪ್ರೊ.ವೇದಾ ದೇಶಪಾಂಡೆ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಅವರು ಪಟ್ಟಣದ ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ ವಾಣಿಜ್ಯ ಹಾಗೂ ಬಿ ಸಿ ಎ ಮಹಾವಿದ್ಯಾಲಯದ ಗ್ರಂಥಾಲಯ ಆವರಣದಲ್ಲಿ ವಿಶ್ವ ಗುಬ್ಬಚ್ಚಿ ದಿನಾಚರಣೆ ಸಮಾರಂಭದ ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡಿ, ಮನುಷ್ಯ ಸಹ ಬಾಳ್ವೆಯಿಂದ ಬಾಳಬೇಕೆಂದು ಹೇಳುತ್ತಾರೆ ಆ ಮಾತು ಕೇವಲ ಮನುಷ್ಯ ಮನುಷ್ಯರ ಮಧ್ಯ ಅಷ್ಟೇ ಅಲ್ಲದೇ, ಪಶು ಪಕ್ಷಿ ಪ್ರಾಣಿಗಳಿಗೂ ಅನ್ವಯಿಸಿಕೊಳ್ಳಬೇಕೆಂದ ವೇದಾ ಪಕ್ಷಿ ಪ್ರೇಮಿ ಸಲೀಂ ಅಲಿಯುವರನ್ನು ನೆನಪಿಸಿಕೊಂಡು ಊರಿಗೊಬ್ಬ ಓಣಿಗೊಬ್ಬ ಸಲೀಂ ಅಲಿಗಳು ಹುಟ್ಟಲಿ ಎಂದರು.

ಗ್ರಂಥಪಾಲಕ ಡಾ.ಬಸವಂತ ಬರಗಾಲಿ ಮಾತನಾಡಿ ಅಳಿವಿನಂಚಿನಲ್ಲಿರುವ ಮನೆ ಅಂಗಳದ ಗುಬ್ಬಚ್ಚಿಗಳನ್ನು ಉಳಿಸುವುದು ಹಾಗೂ ಅವುಗಳ ಸಂತತಿಯನ್ನು ಹೆಚ್ಚಿಸುವ ಉದ್ದೇಶದಿಂದ 2010 ರಲ್ಲಿ ಮಹಮ್ಮದ್ ದಿಲಾವರ ನೇತೃತ್ವದ ಭಾರತದ ನೇಚರ ಫಾರೆವರ ಸೊಸೈಟಿ ಮತ್ತು ಫ್ರಾನ್ಸ್ ನ ಇಕೋಸಿಸ್ ಆಕ್ಷನ್ ಫೌಂಡೇಶನ್ ಜಂಟಿಯಾಗಿ ಮಾರ್ಚ 21ನ್ನು ಗುಬ್ಬಚ್ಚಿ ದಿನವನ್ನಾಗಿ ಘೋಷಿಸಿದವು.

ಕಾಂಕ್ರೀಟ್ ಮನೆಗಳು ಆಹಾರದ ಕೊರತೆ ಮತ್ತು ಮೊಬೈಲ್ ವಿಕಿರಣಗಳು ಗುಬ್ಬಚ್ಚಿಗಳ ಸಂತತಿ ಕುಸಿತಕ್ಕೆ ಪ್ರಮುಖ ಕಾರಣವಾಗಿದ್ದು ಮನೆಯ ಅಂಗಳ ಬಾಲ್ಕನಿ ತೋಟಗಳಲ್ಲಿ ನೀರು ಮತ್ತು ದಾನ್ಯದ ಪಾತ್ರೆಗಳನ್ನು ಇಡುವ ಮೂಲಕ ಈ ಪುಟ್ಟ ಪಕ್ಷಿಗೆ ಸಹಾಯ ಮಾಡಬಹುದು. ಎಂದರು.



ವಿದ್ಯಾರ್ಥಿ ಸಂಗಪ್ಪಾ ಕುಲಗೋಡ ಮಾತನಾಡಿ ಗುಬ್ಬಚ್ಚಿ ದಿನಾಚರಣೆ ಕೇವಲ ಒಂದು ದಿನಕ್ಕೆ ಸೀಮಿತವಾಗದೆ ನಮ್ಮ ಜೀವನದ ಒಂದು ಭಾಗವಾಗಿ ಪ್ರತಿಜ್ಞೆ ಮಾಡಿ ವರ್ಷ ಪೂರ್ತಿ ಗುಬ್ಬಚ್ಚಿಗಳಿಗೆ ಕಾಳುಕಡ್ಡಿ ನೀರು ಹಾಕೋಣ ಎಂದರು.

ಈ ಸಂದರ್ಭದಲ್ಲಿ ಗುಬ್ಬಚ್ಚಿಗಳಿಗೆ ಪ್ರಾಧ್ಯಾಪಕರುಗಳು ಹಾಗೂ ವಿದ್ಯಾರ್ಥಿಗಳು ಗುಬ್ಬಚ್ಚಿಗಳಿಗೆ ನೀರು ಹಾಗೂ ಕಾಳುಗಳನ್ನು ಹಾಕುವದರ ಮೂಲಕ, ಗುಬ್ಬಚ್ಚಿ ದಿನಾಚರಣೆಯನ್ನು ಆಚರಿಸಲಾಯಿತು. ಪ್ರಾರಂಭದಲ್ಲಿ ನಿಖೀತಾ ಭರಮ್ಮನ್ನವರ ಸ್ವಾಗತಿಸಿದರು ಶಿಲ್ಪಾ ಕಾಂಬಳೆ ನಿರೂಪಿಸಿದರು. ಎಸ್. ಕೆ ಅಂಗಡಿ ವಂದಿಸಿದರು.

# ಶ್ರೀ ಮಹರ್ಷಿ ವಾಲ್ಮೀಕಿ ಬ್ರಿಗೇಡ್ ಲೋಕಾರ್ಪಣೆ



**ಚನ್ನಮ್ಮನ ಕಿತ್ತೂರು:** ಕ್ಷೇತ್ರದ ಸುತಗಟ್ಟಿ ಗ್ರಾಮದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಬ್ರಿಗೆಡನ್ನು ಸಚಿವ ಸತೀಶ ಜಾರಕಿಹೊಳಿ ಉದ್ಘಾಟಿಸಿದರು. ಪೂಜ್ಯ ಸಿದ್ದಲಿಂಗ ಮಹಾಸ್ವಾಮಿಜೀ ಸಾನಿಧ್ಯವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶಾಸಕ ಬಾಬಾಸಾಹೇಬ ಪಾಟೀಲ, ಸಭೆಯಲ್ಲಿ ಮಾಜಿ ಜಿಪಂ ಸದಸ್ಯ ಹಾಗೂ ನೇಸರಗಿ ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ನಿಂಗಪ್ಪ ಹರಕೇರಿ ಹಾಗೂ ಘಟಕದ ಪದಾಧಿಕಾರಿಗಳು, ಮುಖಂಡರು, ಗ್ರಾಮದ ಹಿರಿಯರು, ಇನ್ನಿತರರು ಉಪಸ್ಥಿತರಿದ್ದರು.

# ಸಂಭ್ರಮದ ರಂಜಾನ್ ಆಚರಣೆ



ಬೆಳಗಾವಿ ವಾರ್ತೆ

**ಲಕ್ಷ್ಮೇಶ್ವರ:** ಪಟ್ಟಣ ಸೇರಿದಂತೆ ತಾಲೂಕಿನ ತುಂಬೆಲ್ಲ ಮುಸ್ಲಿಂ ಸಮಾಜ ಬಾಂಧವರು ರಂಜಾನ್ ಹಬ್ಬದ ಕೊನೆಯ ದಿನವಾದ ನಿನ್ನೆ ಈದ್ ಉಲ್ ಫಿತರ್ ಹಬ್ಬವನ್ನು ಅತ್ಯಂತ ಸಡಗರ ಸಂಭ್ರಮದಿಂದ ಆಚರಿಸಿದರು.

ಕಳೆದು ಒಂದು ತಿಂಗಳದಿಂದ ಉಪವಾಸ ವೃತ ಆಚರಣೆಯಲ್ಲಿ ತೊಡಗಿದ್ದ ಸಮಾಜ ಬಾಂಧವರು ನಿನ್ನೆ ಈದ್ಗಾ ಮೈದಾನಗಳಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಮತ್ತು ಪರಸ್ಪರ ಅಭಿನಂದಿಸುವ ಮೂಲಕ ರಂಜಾನ್ ಹಬ್ಬವನ್ನು ಸಂಪನ್ನಗೊಳಿಸಿದರು.

ಪಟ್ಟಣದ ಮುಕ್ತಿಮಂದಿರ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಹೊಸ ಬಟ್ಟೆ ಧರಿಸಿ ಸಾವಿರಾರು ಮುಸ್ಲಿಂ ಬಾಂಧವರು ಶ್ರದ್ಧಾ ಭಕ್ತಿಯಿಂದ ಪ್ರಾರ್ಥನೆ ಮಾಡಿದರು ಬಳಿಕ ಒಬ್ಬರನ್ನು ಒಬ್ಬರು ಅಭಿನಂದಿಸಿ ಹಬ್ಬದ ಶುಭಾಶಯಗಳು ಕೋರಿದರು.

ಈ ಸಂದರ್ಭದಲ್ಲಿ ಧರ್ಮ ಗುರು ಮಹಮ್ಮದ್ ಹಾಫೀಜ್ ಶಕೀಲ್ ಅವರು ಎಲ್ಲರೂ ಪರಸ್ಪರ ಸ್ನೇಹ ಶಾಂತಿ ಸೌಹಾರ್ದತೆಯಿಂದ ಬಾಳಿ ಬದುಕಬೇಕು ಜಗತ್ತಿನಲ್ಲಡೆ ಶಾಂತಿಯ ಸಮೃದ್ಧಿ ನೆಲೆಸಿ ನೆಮ್ಮದಿಯ ಬದುಕು ಅಲ್ಲಾಹು ದಯಪಾಲಿಸಲಿ ಎಂದು ಹೇಳಿದರು. ಪ್ರಾರ್ಥನೆಯಲ್ಲಿ ಅಂಜುಮನ್ ಎ ಇಸ್ಲಾಂ ಸಂಸ್ಥೆಯ ಎಂಎಂ ಗದಗ ದಾದಾಪೀರ್ ಮುಚ್ಚಾಲೆ ಸಾಹೇಬ್ ಜಾನ್ ಹವಾಲ್ದಾರ ಫಿರ್ದೋಷ ಆಡೂರ ಜಾಕಿರ್ ಹುಸೇನ್ ಹವಾಲ್ದಾರ ಯುನಿ ಸ್ ಚೌರಿ ಕರೀಂ ಸುರಣಗಿ ಇಸ್ಮಾಯಿಲ್ ಆಡೂರ್ ಎನ್ ಎಂ ಗದಗ ಸೇರಿದಂತೆ ಸಾವಿರಾರು ಮುಸ್ಲಿಂ ಸಮಾಜ ಬಾಂಧವರು ಪಾಲ್ಗೊಂಡಿದ್ದರು.

# ಉಪ ಚುನಾವಣೆ : ಆಯುಧಗಳನ್ನು ಜಮೆ ಮಾಡಲು ಸೂಚನೆ

**ಬಾಗಲಕೋಟೆ :** ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ ವೇಳಾಪಟ್ಟಿ ಹೊರಡಿಸಿದ್ದು, ಮಾದರಿ ನೀತಿ ಸಂಹಿತೆಯು ಮಾರ್ಚ 15 ರಿಂದ ಎಪ್ರೀಲ್ 6 ವರೆಗೆ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಉದ್ದೇಶದಿಂದ ಹಾಗೂ ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಕ್ರಮವಹಿಸಲು ಮುನ್ನಚ್ಚರಿಕೆ ಕ್ರಮವಾಗಿ ಸಾರ್ವಜನಿಕರು ಪರವಾನಿಗೆ ಪಡೆದ ಶಸ್ತ್ರಾಸ್ತ್ರಗಳನ್ನು ಹೊಂದುವುದು, ಇಟ್ಟುಕೊಂಡು ಸಂಚರಿಸುವುದು, ಸಾಗಾಣಿಕೆ ಮಾಡುವುದನ್ನು ಮತ್ತು ಶಸ್ತ್ರಾಸ್ತ್ರಗಳಿಗೆ ಪರವಾನಿಗೆ ನೀಡುವುದನ್ನು ನಿಷೇಧಿಸಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿ ಸಂಗಪ್ಪ ಅವರು ಆದೇಶ ಹೊರಡಿಸಿದ್ದಾರೆ.

ಅಧಿಕೃತ ಪರವಾನಿಗೆ ಹೊಂದಿರುವ ಆಯುಧಗಳು, ಮದ್ದು ಗುಂಡುಗಳು, ಬೆಂಕಿ ಉಗುಳುವ ಶಸ್ತ್ರಾಸ್ತ್ರಗಳು ಹಾಗೂ ಮಾರಕಾಸ್ತ್ರಗಳನ್ನು ಮಾರ್ಚ 15 ರಿಂದ ಎಪ್ರೀಲ್ 6 ವರೆಗೆ ಹತ್ತಿರದ ಪೊಲೀಸ್ ಠಾಣೆಯಲ್ಲಿ ಜಮೆ ಮಾಡತಕ್ಕದ್ದು. ಭದ್ರತೆಗೋಸ್ಕರ ವಿನಾಯಿತಿ ಕೋರಿ ಸಲ್ಲಿಸುವ ಅರ್ಜಿಗಳನ್ನು ಸ್ಕ್ರೀನಿಂಗ್ ಕಮಿಟಿಯಲ್ಲಿ ಪರಿಶೀಲಿಸಿ ವಿನಾಯಿತಿ ನೀಡಲಾಗುವುದು. ಪೊಲೀಸ್ ಇಲಾಖೆಯು ತಮ್ಮಲ್ಲಿ ತಂದಿರಿಸಿದ ಶಸ್ತ್ರಾಸ್ತ್ರಗಳನ್ನು ಸುರಕ್ಷಿತ ಅಭಿರಕ್ಷೆಯಲ್ಲಿಡುವುದಕ್ಕೆ ಸೂಕ್ತ ವ್ಯವಸ್ಥೆ ಮಾಡತಕ್ಕದ್ದು, ಶಸ್ತ್ರಾಸ್ತ್ರಗಳನ್ನು ಪರವಾನಿಗೆದಾರರಿಗೆ ಸೂಕ್ತ ರಸೀದಿಯನ್ನು ಕೊಡತಕ್ಕದ್ದೆಂದು ಆದೇಶದಲ್ಲಿ ತಿಳಿಸಿದ್ದಾರೆ.

# ಭಾರತದ ಸಂವಿಧಾನ ಜಗತ್ತಿಗೆ ಮಾದರಿ



ಬೆಳಗಾವಿ ವಾರ್ತೆ

**ಚನ್ನಮ್ಮನ ಕಿತ್ತೂರು:** ಭಾರತದ ಸಂವಿಧಾನ ಜಗತ್ತಿಗೆ ಮಾದರಿ ಎಂದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ. ರಮೇಶ ಕಾಂಬಳೆ ಹೇಳಿದರು.

ಸಮೀಪದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ ಬೆಳಗಾವಿ ಇತಿಹಾಸ ವಿಭಾಗ, ಸಮಾಜ ವಿಜ್ಞಾನ ಸಂಘ ಹಾಗೂ ಐ.ಕ್ಯೂ.ಎ.ಸಿ.ಗಳ ಸಂಯುಕ್ತಾಶ್ರಯದಲ್ಲಿ ಮಹಾವಿದ್ಯಾಲಯ ಸಭಾಂಗಣದಲ್ಲಿ ಆಯೋಜಿಸಿದ್ದ ಭಾರತೀಯ ಸಂವಿಧಾನದ ಚಾರಿತ್ರಿಕ ಬೆಳವಣಿಗೆ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ. ಭಾರತದ ಸಂವಿಧಾನವು ಡಾ.ಬಿ.ಆರ್. ಅಂಬೇಡ್ಕರವರ ಮಾರ್ಗದರ್ಶನದಲ್ಲಿ ಬುದ್ಧನ ಸಮಾನತೆ , ಸ್ವಾತಂತ್ರ್ಯ ಹಾಗೂ ಭ್ರಾತೃತ್ವ ತತ್ವಗಳ ಮೇಲೆ ರೂಪಿತವಾಗಿದೆ. ಅಂಬೇಡ್ಕರ ಅವರು ಭೌದ್ಧ ಧರ್ಮದ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸಂವಿಧಾನದಲ್ಲಿ ಅಳವಡಿಸಿದ್ದಾರೆ. ಭಾರತೀಯ ಸಂವಿಧಾನದ ರಚನೆಯ ಹಿಂದೆ ಅನೇಕ ಚಾರಿತ್ರಿಕ ಅಂಶಗಳು ಅಡಗಿವೆ. ಬ್ರಿಟಿಷರು ಭಾರತದಲ್ಲಿ ತಮ್ಮ ಆಡಳಿತದ ಅನುಕೂಲಕ್ಕಾಗಿ ಅನೇಕ ಕಾಯ್ದೆಗಳನ್ನು ಜಾರಿಗೆ ತಂದರು.

ಅವುಗಳಲ್ಲಿ ರೆಗ್ಯುಲೆಟಿಂಗ್ ಕಾಯ್ದೆ, ಚಾರ್ಟರ್ ಕಾಯ್ದೆಗಳು ಹಾಗೂ 1909, 1919 ಹಾಗೂ 1935ರ ಕಾಯ್ದೆಗಳು ಭಾರತೀಯ ಸಂವಿಧಾನ ರಚನೆಯಲ್ಲಿ ಮಹತ್ವದ ಮೂಲಾಧಾರಗಳಾಗಿವೆ ಎಂದರು. ಪ್ರಾಚಾರ್ಯ ಡಾ. ಎಸ್. ಸಿ. ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಮಹಾವಿದ್ಯಾಲಯದ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಇಂತಹ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು, ಇದರ ಸದುಪಯೋಗ ಪಡೆದುಕೊಂಡು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದರು.

ಉಪಪ್ರಾಚಾರ್ಯ ಡಾ. ಅರ್ಜುನ ಜಂಬಗಿ ಪ್ರಸ್ತಾವಿಕವಾಗಿ ಮಾತನಾಡಿ ಭಾರತೀಯ ಸಂವಿಧಾನದ ರಚನೆಯಲ್ಲಿ ಅಂಬೇಡ್ಕರ ರವರ ಶ್ರಮ ಹಾಗೂ ಕೊಡುಗೆಗಳ ಕುರಿತು ವಿವರಿಸಿದರು.

ಈ ವೇಳೆ ಉಪನ್ಯಾಸಕ ಡಾ. ಸದಾಶಿವ ಮುಗಳಿ, ಡಾ. ನೂತನ ದೇಸಾಯಿ, ವಾಣಿಜ್ಯ ಶಾಸ್ತ್ರ ಡಾ. ಮುಕುಂದ ಮುಂಡರಗಿ, ಕಾಲೇಜಿನ ಎಲ್ಲ ಬೋಧಕ, ಬೋಧಕೇತರ ಸಿಬ್ಬಂದಿ ವಿದ್ಯಾರ್ಥಿಗಳು ಇದ್ದರು. ಸ್ವಾಗತ ಸಾಕ್ಷೀ ಬಾಳಕರ, ಅತಿಥಿ ಪರಿಚಯ ಜ್ಯೋತಿ ಚಾಪಗಾಂವ, ಪ್ರಾರ್ಥಣೆ ಪ್ರಿಯಾಂಕಾ ತಿಲಗರ, ನಿರೂಪಣೆ ವಿದ್ಯಾಶ್ರೀ ಜನಗೌಡ, ಲಕ್ಷ್ಮೀ ಕದಮ ವಂದಿಸಿದರು.

# ಅದ್ದೂರಿಯಾಗಿ ಮದುವೆ ಮಾಡುವ ಬದಲು, ಅದೇ ಹಣದಲ್ಲಿ ನೂರಾರು ಬಡವರ ಮಕ್ಕಳ ಮದುವೆ ಮಾಡಿಸುವ ಮೂಲಕ ಸಮಾಜಕ್ಕೆ ಮಾದರಿಯಾಗಬೇಕು,"

ಬೆಳಗಾವಿ ವಾರ್ತೆ

**ಮುದ್ದೇಬಿಹಾಳ:** "ಇಂದಿನ ರಾಜಕಾರಣಿಗಳು ತಮ್ಮ ಮಕ್ಕಳ ಮದುವೆಗಳನ್ನು ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಅದ್ದೂರಿಯಾಗಿ ಮಾಡುವ ಬದಲು, ಅದೇ ಹಣದಲ್ಲಿ ನೂರಾರು ಬಡವರ ಮಕ್ಕಳ ಮದುವೆ ಮಾಡಿಸುವ ಮೂಲಕ ಸಮಾಜಕ್ಕೆ ಮಾದರಿಯಾಗಬೇಕು," ಎಂದು ಬಸವನ ಬಾಗೇವಾಡಿ ಶಿವಪ್ರಕಾಶ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ತಂಗಡಗಿ ಗ್ರಾಮದಲ್ಲಿ ಶುಕ್ರವಾರ ದುರ್ಗಾದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಸರ್ವಧರ್ಮ ಸಾಮೂಹಿಕ ವಿವಾಹ ಹಾಗೂ ಧರ್ಮಸಭೆ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.

**ದುಂದುವೆಚ್ಚಕ್ಕೆ ಕಡಿವಾಣ ಬೀಳಲಿ:** ಕಾರ್ಯಕ್ರಮದಲ್ಲಿ ಮಾತನಾಡಿದ ಕುಂಟೋಜಿ ಭಾವೈಕ್ಯತಾ ಹಿರೇಮಠದ ಚೆನ್ನವೀರ ಶಿವಾಚಾರ್ಯರು, "ಮದುವೆಗೆ ಮುಂಚಿತವಾಗಿ ಫೋಟೋ ಶೂಟ್‌ಗಳಿಗಾಗಿ ಲಕ್ಷಾಂತರ ರೂಪಾಯಿ ವ್ಯರ್ಥ ಮಾಡುವ ಇಂದಿನ ಟ್ರೆಂಡ್ ಬದಲಾಗಬೇಕು. ಸಮಾಜದಲ್ಲಿ ಇಂತಹ ಮಾದರಿ ವಿವಾಹಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಗಬೇಕು," ಎಂದರು. ಬಿಲ್‌ಕೆರೂರ ಬಿಲ್ವಾಶ್ರಮದ ಸಿದ್ಧಲಿಂಗ ಶಿವಾಚಾಯರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, "ಸಾಮೂಹಿಕ ವಿವಾಹಗಳು ಬಡವರ ಮದುವೆಗಳಲ್ಲ, ಇವು ನಿಜವಾದ ಭಾಗ್ಯವಂತರ ಮದುವೆಗಳು," ಎಂದು ಬಣ್ಣಿಸಿದರು.

**ಮಂಗಳಮುಖಿಯರನ್ನು ಕಡೆಗಣಿಸ ದಿರಿ:** ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ, ಜಾನಪದ ಕಲಾವಿದೆ ಮಂಜಮ್ಮ ಜೋಗತಿ ಮಾತ ನಾಡಿ, "ತೃತೀಯ ಲಿಂಗಿ ಮಕ್ಕಳು ಜನಿಸಿ ದರೆ ಅವರನ್ನು ಕಡೆಗಣಿಸದೆ ಉತ್ತಮ ಶಿಕ್ಷಣ ಕೊಡಿಸಿ. ಶಿಕ್ಷಣ ದೊರೆಯದ ಕಾರಣಕ್ಕೆ ಅವರು ರಸ್ತೆ, ರೈಲು ನಿಲ್ದಾಣಗ ಳಲ್ಲಿ ಕೈಚಾಚುವಂತಾಗಿದೆ. ಸರ್ಕಾರ ಮತ್ತು ಸಂಘ ಸಂಸ್ಥೆಗಳು ಅವರಿಗೆ ಅನುಕಂಪ ತೋರುವ ಬದಲು ಉದ್ಯೋಗಾವಕಾಶ ಕಲ್ಪಿಸಬೇಕು," ಎಂದು ಮನವಿ ಮಾಡಿದರು.



**26 ಜೋಡಿಗಳ ನವಜೀವನ:** ಈ ಬಾರಿಯ ಜಾತ್ರಾ ಮಹೋತ್ಸವದ ಅಂಗವಾಗಿ ಒಟ್ಟು 26 ಜೋಡಿಗಳು ನವಜೀವನಕ್ಕೆ ಕಾಲಿರಿಸಿದರು. ಶಿಶು ಅಭಿವೃದ್ಧಿ ಮೇಲ್ವಿಚಾರಕಿ ಆರ್.ಎಸ್. ಬಿರಾದಾರ ಅವರು ಸ್ಥಳದಲ್ಲಿದ್ದು ಯಾವುದೇ ಬಾಲ್ಯ ವಿವಾಹ ನಡೆಯದಂತೆ ಜಾಗೃತಿ ವಹಿಸಿದ್ದರು. ಸಂಚಾರ ದಟ್ಟಣೆ ನಿಯಂತ್ರಿಸಲು ಪೊಲೀಸ್ ಇಲಾಖೆ ಸೂಕ್ತ ಬಂದೋಬಸ್ತ್ ಕೈಗೊಂಡಿತ್ತು.

ಕಾರ್ಯಕ್ರಮದಲ್ಲಿ ತಂಗಡಗಿ ಹಡಪದ ಅಪ್ಪಣ್ಣ ಸಂಸ್ಥಾನ ಗುರುಪೀಠದ ಅನ್ನದಾನ ಭಾರತಿ ಅಪ್ಪಣ್ಣ ಶ್ರೀ, ಬಳವಾಟದ ಸೋಮಶೇಖರ ಶಿವಾಚಾರ್ಯರು, ಸಚಿವರ ಸಹೋದರ ನಾಗರಾಜ ತಂಗಡಗಿ, ದೇವಿ ಆರಾಧಕರಾದ ಶಾಂತಪ್ಪ ಪೂಜಾರಿ, ಮುತ್ತಪ್ಪ ಪೂಜಾರಿ, ಮಂಜು ಪೂಜಾರಿ, ಸಂಗಣ್ಣ ಗುಳೇದಗುಡ್ಡ, ಸಂಗಣ್ಣ ದೇವರಮನಿ, ಚರಲಿಂಗಪ್ಪ ಹಾದಿಮನಿ, ಎಂ.ಡಿ. ತಾರನಾಳ ಸೇರಿದಂತೆ ಮತ್ತಿತರ ಪ್ರಮುಖರು ಇದ್ದರು.

# ಕೃಪಾ ಆರೋಗ್ಯ-ಸಮಾಜ ಸೇವಾ ಸಂಸ್ಥೆಯ ಸೇವೆ ಅಗ್ರಗಣ್ಯ

## ಮಾನಸಿಕ ಅಸ್ವಸ್ಥರಿಗೆ ಮತ್ತು ನಿರ್ಗತಿಕರ ಬಾಳಿಗೆ ಆಸರೆ ಹಿರೇಮನಿ ದಂಪತಿಗಳು ಆಸರೆ




ಬೆಳಗಾವಿ ವಾರ್ತೆ

**ಅಥಣಿ:** ಅನಾಥ ಮತ್ತು ನಿರ್ಗತಿಕ ಮಾನಸಿಕ ಅಸ್ವಸ್ಥರಿಗೆ ವಿಶೇಷ ಮಕ್ಕಳನ್ನು ಸಂರಕ್ಷಣೆ ಮಾಡುವುದರ ಜೊತೆಗೆ ಅವರಿಗೆ ಉಚಿತ ಶಿಕ್ಷಣ,ಅನ್ನ ಮತ್ತು ವಸತಿ ವ್ಯವಸ್ಥೆ ಕಲ್ಪಿಸಿರುವುದು, ಅನೇಕ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿರುವ ನಿಜಪ್ಪ ಹಿರೇಮನಿ ದಂಪತಿಗಳ ಕಾರ್ಯ ಶ್ಲಾಘನೀಯ ಎಂದು ಸಿಪಿಐ ಸಂತೋಷ ಹಳ್ಳೂರ ಹೇಳಿದರು. ಅವರು ಅಥಣಿ ಪಟ್ಟಣದಲ್ಲಿ ಕೃಪಾ ಆರೋಗ್ಯ ಮತ್ತು ಸಮಾಜ ಸೇವಾ ಸಂಸ್ಥೆಯಿಂದ ಮಂಗಳಮುಖಿಯರಿಗೆ ಹಾಗೂ ಮಾಜಿ ದೇವದಾಸಿಯರಿಗೆ ವಸ್ತ್ರ-ಉಡುಗೊರೆ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಅಥಣಿ ಪಟ್ಟಣದಲ್ಲಿ ಅನೇಕ ವರ್ಷಗಳಿಂದ ವಿಶೇಷ ಪೀಡಿತ ಮಕ್ಕಳಿಗೆ ಸಂರಕ್ಷಣೆ ನೀಡುವುದರ ಜೊತೆಗೆ ಸಮಾಜದಲ್ಲಿ ಮತ್ತು ದೇವದಾಸಿಯರಿಗೆ ಏಡ್ಸ್ ರೋಗದ ಕುರಿತು ಅರಿವು ಮೂಡಿಸುತ್ತಿರುವ ಜನಜಾಗ್ರತೆಯ ಕಾರ್ಯಕ್ರಮವಾಗಿದೆ. ಅನೇಕ ಸಂದರ್ಭಗಳಲ್ಲಿ ಪೊಲೀಸ್ ಇಲಾಖೆಯೊಂದಿಗೆ ಸಹಕಾರಿಯಾಗಿ ಕೆಲಸ ಮಾಡುತ್ತಿರುವ ನಿಜಪ್ಪಾ ಹಿರೇಮನಿ ಅವರ ಕಾರ್ಯ ಅಗ್ರಗಣ್ಯ ಎಂದರು.

ಇನ್ನೂ ಅಥಿತಿಯಾಗಿ ಡಾ. ಸಂಗಮೇಶ ಮಮದಾಪುರ ಮಾತನಾಡಿ ಹಸಿದ ಹೊಟ್ಟೆಗೆ ಅನ್ನ ನೀಡುವ ನಿಜಪ್ಪ ಹಿರೇಮನಿ ಅವರ ಸಮಾಜಮುಖಿ ಸೇವೆ ಅನೇಕ ವರ್ಷಗಳಿಂದ ನಡೆದು ಬಂದಿದೆ. ತಾಯಿಯ ಗುಣ ಹೊಂದಿರುವ ಅವರು ವಿಶೇಷ ಪೀಡಿತ ಮಕ್ಕಳಿಗೆ ಆಶ್ರಯ ನೀಡುವ ಮೂಲಕ ಜೀವನದಲ್ಲಿ ಮಹತ್ತರ ಮಾಡಿದ್ದಾರೆ. ಅವರ ಸಾಧನೆ ಅಮೋಘವಾದದ್ದು, ಅವರು 30 ವಿಶೇಷ ಪೀಡಿತ ಮಕ್ಕಳನ್ನು ಸಲುಹುತ್ತಿರುವುದು ಅದ್ಭುತ. ಅದರಂತೆಯೇ ಮಾಜಿ ದೇವದಾಸಿಯರನ್ನು ಕಡೆಗಣಿಸದೇ ಅವರನ್ನೂ ಗೌರವದಿಂದ ಕಾಣಬೇಕು ಎಂದರು.

ಅಥಣಿ ಕೃಪಾ ಆರೋಗ್ಯ ಮತ್ತು ಸಮಾಜ ಸೇವಾ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ನಿಜಪ್ಪ ಹಿರೇಮನಿ ಮಾತನಾಡಿ, ನಾನು ಚಿಕ್ಕಂದಿನಿಂದಲೇ ಕಷ್ಟದಿಂದ ಬಂದಿದ್ದು, ಸಮಾಜದ ಹಸಿವು ಅರಿತಿದ್ದೇನೆ. ಎಲ್ಲರ ಸಹಾಯದಿಂದ ಈ ಸಂಸ್ಥೆ ಮೂಲಕ ಸಾಮಾಜಿಕ ಸೇವಾ ಕಾರ್ಯ ಮಾಡುತ್ತಿದ್ದೇನೆ. ತಾಯಿಗೆ ಗೌರವ ಸಲ್ಲಿಸುವ ನಿಟ್ಟಿನಲ್ಲಿ ಕಾಣಿಕೆ ನೀಡಿ ನಿಮ್ಮಲ್ಲಿ ನನ್ನ ತಾಯಿ ಕಾಣುತ್ತೇನೆ.ಬಾಡಗಿ ಕಟ್ಟಡ ದಲ್ಲಿ ಸಂಸ್ಥೆಯ ಕಾರ್ಯಗಳನ್ನು ನಡೆಸುತ್ತಿದ್ದೇನೆ. ರಾಜ್ಯ ಸರ್ಕಾರದ ಸಹಾಯ ಬಂದರೆ ಮತ್ತಷ್ಟು ಸಮಾಜ ಸೇವೆ ಮಾಡಲು ಅನುಕೂಲವಾಗಲಿದೆ ಎಂದರು.

ಈ ವೇಳೆ ಅಥಣಿ ಉದ್ಯಮಿ ಸುಶಾಂತ ಪಟ್ಟಣ, ವೇದಾ ಪಟ್ಟಣ, ಸಂಗೀತಾ ಹಿರೇಮನಿ, ಡಾ.ವಿಜಯಾ ಗಸ್ತಿ, ಸಂಗಮೇಶ ಹಚಡದ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಒಂದು ತಿಂಗಳವರೆಗೆ ಕಟ್ಟು ನಿಟ್ಟಾಗಿ ಉಪವಾಸ ಮಾಡಿ ಗಮನ ಸೆಳೆದ ಸಹೋದರ-ಸಹೋದರಿ

ಬೆಳಗಾವಿ ವಾರ್ತೆ

**ಘಟಪ್ರಭಾ:** ಪವಿತ್ರ ರಂಜಾನ್ ಹಬ್ಬದ ಸಂದರ್ಭದಲ್ಲಿ ಒಂದು ಹನಿ ನೀರು ಕುಡಿಯದೆ ಮುಸ್ಲಿಂ ಬಾಂಧವರು ಕಟ್ಟುನಿಟ್ಟಾದ ಉಪವಾಸ ಪಾಲನೆ ಮಾಡುತ್ತಾರೆ. ಇಂತಹ ಕಠಿಣ ಉಪವಾಸ ಒಂದು ತಿಂಗಳವರೆಗೆ ಮಾಡೋದು ಕೆಲವೊಂದು ಸಲ ದೊಡ್ಡವರಿಗೂ ಕಷ್ಟವಾಗುತ್ತದೆ. ಆದರೆ ಇಂತಹ ಕಠಿಣ ಉಪವಾಸವನ್ನು ಒಂದು ತಿಂಗಳವರೆಗೆ ಕಟ್ಟು ನಿಟ್ಟಾಗಿ ಆಚರಿಸುವ ಮೂಲಕ ಘಟಪ್ರಭಾ ಪಟ್ಟಣದಲ್ಲಿ ಇಬ್ಬರು ಸಹೋದರ,ಸಹೋದರಿ ಗಮನ ಸೆಳೆದಿದ್ದಾರೆ. ಪ್ರತಿದಿನ ನಸುಕಿನ ಜಾವ 4 ಗಂಟೆಗೆ ತಂದೆ-ತಾಯಿ ಜೊತೆಗೆ ಎದ್ದು ಇಬ್ಬರೂ ಮಕ್ಕಳು ಮನೆಯವರ ಜೊತೆ ಪ್ರಾರ್ಥನೆ ಸಲ್ಲಿಸುತ್ತಾರೆ, ಘಟಪ್ರಭಾ ಪಟ್ಟಣದ ಬಸವ ನಗರದದಲ್ಲಿರುವ ಫಾರೂಖ್ ಅತ್ತಾರ ಎಂಬುವರ ಮಕ್ಕಳಾದ 10ವರ್ಷದ ಪುತ್ರ ಫಹೀಮ್ ಹಾಗೂ 6ವರ್ಷದ ಪುತ್ರಿ ರೂಹಿ ಸೇರಿ ರಂಜಾನ್ ಹಬ್ಬದ ಪ್ರಯುಕ್ತ ಒಂದು ತಿಂಗಳದ ಉಪವಾಸವನ್ನು ಕೈಗೊಂಡಿದ್ದಾರೆ. ನಾಲ್ಕನೇಯು ತರಗತಿಯಲ್ಲಿ ಓದುತ್ತಿರುವ ಫಹೀಮ್ ಹಾಗೂ ರೂಹಿ ಯುಕೆಜಿ ತರಗತಿಯಲ್ಲಿ ಓದುತ್ತಿದ್ದು, ಕಳೆದ ವರ್ಷವು ರಂಜಾನ್ ವೇಳೆ ಸ್ವಲ್ಪ ದಿನ ಉಪವಾಸ ಆಚರಿಸಿದ್ದರು.ಆದರೆ ಈ ಬಾರಿ ತಂದೆ ತಾಯಿ ಮುಂದೆ ಪಟ್ಟು ಹಿಡಿದು ರಂಜಾನ್ ಮೊದಲ ದಿನದಿಂದಲೂ ಹಿಡಿದು 30ದಿನಗಳ ಕಾಲ ಕಟ್ಟು ನಿಟ್ಟಾಗಿ ಉಪವಾಸಗಳನ್ನು ಮಾಡಿದ್ದಾರೆ.



10 ವರ್ಷದ ಪುತ್ರ ಫಹೀಮ್ ಹಾಗೂ 6 ವರ್ಷದ ಪುತ್ರಿ ರೂಹಿ

# ಗುಬ್ಬಲಗುಡ್ಡ ಕೆಂಪಯ್ಯಸ್ವಾಮಿಜಾತ್ರಾ; ಷಟ್‌ಸ್ಥಲ ಧ್ವಜಾರೋಹಣ

ಬೆಳಗಾವಿ ವಾರ್ತೆ

**ಘಟಪ್ರಭಾ:** ಗುಬ್ಬಲಗುಡ್ಡ ಕೆಂಪಯ್ಯಸ್ವಾಮಿ ಮಠದಲ್ಲಿ ಮುಂದಿನ 12 ದಿನಗಳು ನಡೆಯುವ ಜಾತ್ರಾ ಪ್ರಯುಕ್ತ ಇಂದು ಷಟ್‌ಸ್ಥಲ ಧ್ವಜಾರೋಹಣ ನೇರವೇರಿಸಲಾಯಿತು.

ಜಡೇಸಿದ್ದೇಶ್ವರ ಮಠ ಸುಣದೋಳಿಯ ಶಿವಾನಂದ ಮಹಸ್ವಾಮಿಗಳು ಧ್ವಜಾರೋಹಣ ನೇರವೇರಿಸಿ ಜಾತ್ರಾ ಪ್ರಾರಂಭದಲ್ಲಿ ಎಲ್ಲಾ ಮಠಗಳಲ್ಲಿ ಷಟಸ್ಥಲ ಧ್ವಜರೋಹಣ ಮಾಡುತ್ತಾರೆ ಇದು ಸಂಪ್ರದಾಯವಾಗಿದ್ದು ಕಳೆದ ಕೆಲವು ವರ್ಷಗಳಿಂದ ಘಟಪ್ರಭಾ ಭಾಗದಲ್ಲಿ ಡಾ॥ ಮಲ್ಲಿಕಾರ್ಜುನ ಮಹಾಸ್ವಾಮಿಗಳ ಮಾರ್ಗದರ್ಶನದಲ್ಲಿ ಅಧ್ಯಾತ್ಮಿಕ ಕಾರ್ಯಕ್ರಮ ನಡೆದು ಹಿಂದಿನ ಗತವೈಭವವನ್ನು ನಾವು ನೋಡುತ್ತಿದ್ದೇವೆ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಜ್ಞಾನವಂತ ಎಲ್ಲಾ ಯುವ ಯತಿಗಳಿಗೆ ಮಾರ್ಗದರ್ಶಕರಾಗಿದ್ದಾರೆ ಎಂದು ಹೇಳಿದರು. ಪ್ರಾರಂಭದಲ್ಲಿ ಗೋಪೂಜೆ ನೆರವೇರಿಸಿ ಘಟಪ್ರಭಾದ ಅಕ್ಕನ ಬಳಗದ ತಾಯಿಯಂದಿರು ಲಿಂಗೈಕ್ಯ ಶಿವರುದ್ರೇಶ್ವರ ಮಹಾಸ್ವಾಮೀಜಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.



ಈ ಸಂದರ್ಭದಲ್ಲಿ ಡಾ॥ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ವಿರುಪಾಕ್ಷ ಮಹಾಸ್ವಾಮಿಗಳು, ಸಂಗಮೇಶ ದೇವರು, ರೇಣುಕ ದೇವರು, ಗುರುದೇವರು, ಬಸವಚೇತನ ಸ್ವಾಮೀಜಿ, ಮುಖಂಡರಾದ ರಾಮಣ್ಣ ಹುಕ್ಕೇರಿ, ಕಾಶಪ್ಪ ರಾಜನ್ನವರು, ಕಾಡಪ್ಪ ಕರೋಶಿ, ಅಶೋಕ ನಾಯಿಕ, ರವಿ ಹುದಲಿ, ಸುರೇಶ ಮುಂಗರವಾಡಿ, ಶ್ರೀಶೈಲ ಹಿರೇಮಠ, ಜಗದೀಶ ಮಠಪತಿ, ರವೀಂದ್ರ ಉಪ್ಪಾರ, ಸಚಿನ ಖಡಬಡಿ, ವಿಠಲ ಕೌಜಲಗಿ, ಚಂದ್ರಶೇಖರ ಕಾಡದವರ, ಸತೀಶ ಹತ್ತರವಾಟ, ಮುತ್ತಣ್ಣ ಹತ್ತರವಾಟ, ಶಂಕರ ವಸ್ತ್ರದ,ಬಸವರಾಜ ಹಟ್ಟಿಗೌಡರ ಹಾಗೂ ಅಕ್ಕನ ಬಳಗದ ತಾಯಿಯಂದಿರು ಗ್ರಾಮಸ್ಥರು ಹಾಜರಿದ್ದರು.

# ಮಾರ್ತಾಂಡ ಮಲ್ಲಯ್ಯ ಜಾತ್ರಾ ಮಹೋತ್ಸವ: ನಾಳೆಯಿಂದ ಪಾದಯಾತ್ರೆ

**ಗೋಕಾಕ:** ಬೆಳಗಾವಿ ಜಿಲ್ಲೆಯ ಕಾಗವಾಡ ತಾಲ್ಲೂಕಿನ ಶ್ರೀ ಕ್ಷೇತ್ರ ಮಂಗಸೂಳಿಯ ಮಾರ್ತಾಂಡ ಮಲ್ಲಯ್ಯ ಜಾತ್ರಾ ಮಹೋತ್ಸವದ ನಿಮಿತ್ತ ತಾಲ್ಲೂಕಿನ ಬೆಣಚನಮರಡಿ ಗ್ರಾಮದಿಂದ ಮಾ. 25 ರಿಂದ 37ನೇ ವರ್ಷದ ಪಾದಯಾತ್ರೆ ಹಮಿಕೊಳ್ಳಲಾಗಿದೆ.

ಮಾ.28ರ ಶನಿವಾರ ದೇವರಿಗೆ ನೈವೇದ್ಯ ಹಾಗು ಅದೇ ದಿನ ರಾತ್ರಿ ಸರಪಳಿ ಹರಿಯುವುದು. ಬೆಣಚನಮರಡಿ, ನಿಂಗಾಪುರ, ಬೆಟಗೇರಿ, ಹುಣಶ್ಯಾಳ (ಪಿಜಿ), ಕಲ್ಲೋಳಿ, ಮರಡಿ ಶಿವಾಪೂರ ಗ್ರಾಮಗಳಿಂದ ನೂರಾರು ಭಕ್ತರು ನಂದಾ ಜ್ಯೋತಿಯೊಂದಿಗೆ ಪಾದಯಾತ್ರೆ ಕೈಗೊಳ್ಳಲಿದ್ದಾರೆ. ಮಾ. 27ರ ಸಂಜೆ 5 ಗಂಟೆಗೆ ನಂದಾ ಜ್ಯೋತಿ ದೇಗುಲ ತಲುಪಲಿದೆ. ಜ್ಯೋತಿ ಪೂಜೆಯನ್ನು ಬಾಳೇಶ ಅಡಿವೆಪ್ಪ ಗಡಾದ ವಹಿಸಿಕೊಳ್ಳಲಿದ್ದು, ಸಿದ್ದಪ್ಪ ಹೊನ್ನಪ್ಪ ಲಟ್ಟಿ ವಾಹನ ವ್ಯವಸ್ಥೆ ಮಾಡಿದ್ದಾರೆ. ಮಲ್ಲಪ್ಪ ಗಂಗಪ್ಪ ಲಟ್ಟಿ, ಸಂತೋಷ ಬೇಸಲೆ ಅವರು ಮಹಾ ಪ್ರಸಾದ, ಈರವ್ವ ಪ್ರಕಾಶ ಗುಡದಾರ ಹಾಗು ಕೆಂಚವ್ವ ಅ. ಗಡಾದ ಉಡಿ ತುಂಬುವ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಪಾದಯಾತ್ರೆಯಲ್ಲಿ ಭಾಗವಹಿಸುವ ಭಕ್ತಾದಿಗಳು ದೂರವಾಣಿ ಸಂಖ್ಯೆ 99724 45977ಗೆ ಸಂಪರ್ಕಿಸಲು ಕೋರಲಾಗಿದೆ.

# ವಾತ್ಸಲ್ಯ ಮನೆ ಹಸ್ತಾಂತರ ಕಾರ್ಯಕ್ರಮ



ಬೆಳಗಾವಿ ವಾರ್ತೆ

**ಗೋಕಾಕ:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ತಾಲೂಕಿನ ಮಾಲದಿನ್ನಿ ವಲಯದ ಉಪ್ಪಾರಹಟ್ಟಿ ಗ್ರಾಮದಲ್ಲಿ ಮಾಸಾಶನ ಫಲಾನುಭವಿ ಯಲ್ಲವ್ವ ಮದಿಹಳ್ಳಿ ಅವರಿಗೆ ವಾತ್ಸಲ್ಯ ಮನೆ ಹಸ್ತಾಂತರ ಕಾರ್ಯಕ್ರಮ ಜರುಗಿತು. ಎಸ್‌ಕೆಡಿಆರ್‌ಡಿಪಿ ಯೋಜನೆಯ ಧಾರವಾಡ ಪ್ರಾದೇಶಿಕ ವ್ಯಾಪ್ತಿಯ ಪ್ರಾದೇಶಿಕ ನಿರ್ದೇಶಕಿ ಶ್ರೀಮತಿ ದಯಾ ಶೀಲ ಅವರು ಪ್ರಾಸ್ತಾವಿಕವಾಗಿ ಮಾತನಾ ಡಿ, ಡಾ. ವೀರೇಂದ್ರ ಹೆಗ್ಗಡೆ ಮತ್ತು ಮಾತೃಶ್ರೀ ಹೇಮಾವತಿ ಅಮ್ಮನವರ ಆಶಾದಾಯಕ ಕಾರ್ಯಕ್ರಮ ವಾತ್ಸಲ್ಯ ಕಾರ್ಯಕ್ರಮ ಹೇಮಾವತಿ ಅಮ್ಮನವರ ಈ ಕಲ್ಪನೆ ಬಹಳ ಅವಿಸ್ಮರಣೀಯ. ಈ ಯೋಜನೆಯಲ್ಲಿ ಸುಮಾರು 1000 ವಾತ್ಸಲ್ಯ ಮನೆ ನಿರ್ಮಾಣ ಮಾಡಲಾಗುತ್ತಿದೆ. ತಾಲೂಕಿನಲ್ಲಿ 40 ಮಾಸಾಶನ ಫಲಾನುಭವಿಗಳು ಇದ್ದು ಅಸಹಾಯಕರಿಗೆ ನೆಲೆ ಇಲ್ಲದವರಿಗೆ ಯೋಜನೆಯ ವತಿಯಿಂದ ಮನೆ ರಚನೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಬೆಳಗಾವಿ ವಿಭಾಗ ಜಿಲ್ಲಾ ನಿರ್ದೇಶಕ ಎಚ್ ಆರ್ ಲವಕುಮಾರ್, ಜ್ಞಾನವಿಕಾಸ ವಿಭಾಗದ ಯೋಜನಾಧಿಕಾರಿ ಶ್ರೀಮತಿ ಸುಧಾ, ಬಿಸಿ ಯೋಜನಾಧಿಕಾರಿ ಉದಯ, ಜಿಲ್ಲಾ ಜನಜಾಗ್ರತಿ ವೇದಿಕೆಯ ಸದಸ್ಯ ಸುಬ್ಬಾಪುರ ಮಠ, ಮಾಜಿ ತಾಪಂ ಅಧ್ಯಕ್ಷ ಪರಸಪ್ಪ ಚುನ್ನನವರ್, ಮಾಜಿ ಗ್ರಾಪಂ ಅಧ್ಯಕ್ಷ ಈರವ್ವ ಬನಾಜ್, ಸದಸ್ಯರಾದ ಹಣಮಂತ ದುರ್ಗನವರ್, ರಂಗಪ್ಪ ನಂದಿ, ವಾಮದೇವ್ ಜಕಬಾಳ, ಪಾಂಡುರಂಗ ದುರ್ಗನವರ್, ಬಸಯ್ಯ ಮಠದ, ರಾಚಯ್ಯ ಮಠದ ಇದ್ದರು.

ಜ್ಞಾನ ವಿಕಾಸ ಸಮನ್ವಯಧಿಕಾರಿ ಸವಿತಾ ಸ್ವಾಗತಿಸಿದರು.

# ಬಾನಾಮತಿ; ಇಂತಹ ಅನಿಷ್ಟ ಪದ್ದತಿಗಳನ್ನು ನಿಷೇಧಿಸುವಂತೆ ಕರೆ

ಬೆಳಗಾವಿ ವಾರ್ತೆ

**ಕಾಗವಾಡ:** ತಾಲೂಕಿನ ಕವಲಗುಡ್ಡ ಹೊರ ವಲಯದಲ್ಲಿರುವ ಈಶ್ವರ್ ದುಂಡಪ್ಪ ತೆಗ್ಗಿನವರ ಇವರ ಮನೆಗೆ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ರಾಜ್ಯಾಧ್ಯಕ್ಷ ಹುಲಿಕಲ ನಟರಾಜ ಹಾಗೂ ಜಿಲ್ಲಾಧ್ಯಕ್ಷ ಸಂಗಮೇಶ ಹಚ್ಚಡದ ಮತ್ತು ಅಥಣಿ ತಾಲೂಕಾ ಘಟಕದ ಮಹಿಳಾ ಅಧ್ಯಕ್ಷ ಕು. ಸಾನಿಯಾ ಮಕಾನದಾರ ಇವರು ಈಶ್ವರ ದುಂಡಪ್ಪ ತೆಗ್ಗಿನವರ ಮನೆಗೆ ಭೇಟಿ ನೀಡಿ, ತಗ್ಗಿನವರ ಮನೆಯಲ್ಲಿ ಮೂರು ವರ್ಷಗಳಿಂದ ಆಕಸ್ಮಿಕ ಬೆಂಕಿ ಹೊತ್ತಿಕೊಳ್ಳುತ್ತಿತ್ತು. ಇದನ್ನು ಮನಗಂಡು ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ಭೇಟಿಮಾಡಿ ಮನೆಯವರೊಂದಿಗೆ ಸಂದರ್ಶಿಸಿದಾಗ ಅಲ್ಲಿ ಯಾವುದೇ ರೀತಿಯ ಭಾನಾಮತಿ ಹಾಗೂ ಮಾಟ ಮಂತ್ರ ಇರುವುದಿಲ್ಲ. ಆತ್ಮವಿಶ್ವಾಸದಿಂದ ಮನಸ್ಸನ್ನು ಗೆದ್ದು ಧನಾತ್ಮಕ ಚಿಂತನೆ ಮಾಡಿದರೆ ಯಾವುದೇ ಭಯ ಬೇಡ ಎಂದು ಮನೆಯವರಿಗೆ ಆತ್ಮಸ್ಥೈರ್ಯ ನೀಡಿ ಬಹು ವರ್ಷಗಳಿಂದ ಕಂಡು ಬಂದಿರುವ ಸಮಸ್ಯೆಗೆ ಪರಿಹಾರ ನೀಡಲಾಯಿತು.



ಈ ವೇಳೆ ಹುಲಿಕಲ ನಟರಾಜ ಮಾತನಾಡಿ ಬಾನಾಮತಿ ಎಂಬುದು ಶತ್ರುಗಳಿಗೆ ಹಾನಿ ಮಾಡಲು ಅನಾರೋಗ್ಯ ತರಲು ಅಥವಾ ಕುಟುಂಬಗಳನ್ನು ಸರ್ವನಾಶ ಮಾಡಲು ನಡೆಸುವ ಕೆಟ್ಟ ಪ್ರಯೋಗ ಎಂಬ ಭಯ ಜನರಲ್ಲಿದೆ ಇದರ ಭಯಕ್ಕೆ ಬಿದ್ದವರು ಮಾನಸಿಕವಾಗಿ ಕುಗ್ಗಿ ಹೋಗುತ್ತಾರೆ. ಅನೇಕರು ತಮಗಾದ ಕಾಯಿಲೆಗಳಿಗೆ ವೈದ್ಯಕೀಯ ಚಿಕಿತ್ಸೆ ಪಡೆಯುವ ಬದಲು ಇದು ಬಾನಾಮತಿ ಇರಬಹುದು ಎಂದು ಭಾವಿಸಿ ಮಾಟಗಾರರ ಮೊರೆ ಹೋಗುತ್ತಾರೆ ಆದರೆ ಈ ಕುಟುಂಬಕ್ಕೆ

ಕರ್ನಾಟಕ ಸರ್ಕಾರದ ಕರ್ನಾಟಕ ಮೌಢ್ಯ ಪ್ರತಿಬಂಧಕ ಕಾಯ್ದೆಯ ಪ್ರಕಾರ ಇಂತಹ ಅನಿಷ್ಟ ಪದ್ಧತಿಗಳನ್ನು ಮತ್ತು ಬಾನಾಮತಿಯ ಹೆಸರಿನಲ್ಲಿ ನಡೆಯುವ ಅಮಾನವೀಯ ಕೃತ್ಯಗಳನ್ನು ತಿಳಿ ಹೇಳಬೇಕು ಹಾಗೂ ಇಂತಹ ಅನಿಷ್ಟ ಪದ್ಧತಿಗಳನ್ನು ನಿಷೇಧಿಸುವಂತೆ ಕರೆ ನೀಡಿದರು ಇದೇ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಸಂಗಮೇಶ ಹಚಡದ, ಉಪಾಧ್ಯಕ್ಷ ಅಣ್ಣಪ್ಪ ಸವದಿ, ಕಾಗವಾಡ ತಾಲೂಕಾಧ್ಯಕ್ಷ ದಾದಾಸೋ ಸಾವಂತ, ಸೇರಿದಂತೆ ಇನ್ನಿತರು ಉಪಸ್ಥಿತರಿದ್ದರು.

# ಬಸವರಾಜ ಯಕಲಾಸಪೂರ ಅವರ ಷಷ್ಠ್ಯಬ್ದಿಪೂರ್ಣ ಸಮಾರಂಭ

ಬೆಳಗಾವಿ ವಾರ್ತೆ

**ಹುಬ್ಬಳ್ಳಿ:** ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಸಂಘ, ಸಂಸ್ಥೆಗಳಲ್ಲಿ ಕ್ರಿಯಾಶೀಲರಾಗಿ ಕಾರ್ಯ ಮಾಡುತ್ತಿರುವ, ಆತ್ಮೀಯರು, ಹಿತೈಷಿಗಳು, ಹಿರಿಯರಾದ ಬಸವರಾಜ ಪಂಚಲಿಂಗಪ್ಪ ಯಕಲಾಸ ಪೂರ ಅವರ ಷಷ್ಠ್ಯಬ್ದಿಪೂರ್ಣ ಸಮಾರಂಭದಲ್ಲಿ ಬಸವರಾಜ ಪಂಚಲಿಂಗಪ್ಪ ಯಕಲಾಸಪೂರ ಅವರಿಗೆ ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ, ಬಸವ ಪರಿಸರ ಸಂರಕ್ಷಣಾ ಸಮಿತಿಯ ವತಿಯಿಂದ ಗ್ರಂಥ ನೀಡಿ ಗೌರವ ಪೂರ್ವಕವಾಗಿ ಶ್ರದ್ಧಾ ಭಕ್ತಿಯಿಂದ ಗೌರವ ನಮನ, ಪ್ರಣಾಮಗಳನ್ನು ಸಲ್ಲಿಸಿದರು. ಹುಟ್ಟು ಹಬ್ಬದ ಶುಭಾಶಯಗಳನ್ನು ಸಲ್ಲಿಸಿದರು.

ಸಾಮಾಜಿಕ, ಧಾರ್ಮಿಕ, ಮುಂತಾದ ಕ್ಷೇತ್ರಗಳಲ್ಲಿ ಅವರ ಜನಕಲ್ಯಾಣ ಸೇವಾ ಕಾರ್ಯಗಳು ನಿರಂತರವಾಗಿ ಮುಂದುವರೆಯಲಿ ಎಂದು ಶುಭ ಕೋರಿದರು. ಬಸವ ಪರಿಸರ ಸಂರಕ್ಷಣಾ ಸಮಿತಿಯ ಅಧ್ಯಕ್ಷ ಪ್ರೊ ಎಸ್ ವಿ ಪಟ್ಟಣಶೆಟ್ಟಿ , ಪತ್ರಕರ್ತ ಗಿರೀಶ ಎಸ್. ಪಟ್ಟಣಶೆಟ್ಟಿ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ ಕಾರ್ಯದರ್ಶಿ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯ ದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಯ ಜಿಲ್ಲಾ ಘಟಕದ ಉಪಾಧ್ಯಕ್ಷ, ಕರ್ನಾ ಟಕ ವಚನ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ, ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ ಟ್ರಸ್ಟಿ, ಗ್ರಂಥಪಾ ಲಕ ಡಾ. ಸುರೇಶ ಡಿ. ಹೊರಕೇ ರಿ, ಡಾ ಬಿವಿ ಶಿರೂರ , ಪ್ರೊಎಸ್‌ಸಿ ಇಂಡಿ, ಚನ್ನಬಸಪ್ಪ ಧಾರವಾಡಶೆಟ್ಟರ್ , ವಿಕಾಸ ಸೊಪ್ಪಿನ, ಡಾ ರಾಮು ಮೂ ಲಗಿ, ಶಿವಾನಂದ ಬೆಂಗೇರಿ , ಪ್ರಕಾಶ ಶೃಂಗೇರಿ, ಪ್ರಕಾಶ ಪಾಟೀಲ, ವೀರಣ್ಣ ಗೋವೇಶ್ವರ, ರಾಜಣ್ಣ ಬತ್ತಿ , ಸಜ್ಜನರ್ , ದಳವಾಯಿ, ಬಸವರಾಜ, ಶೋಭಾ ಬೆಲ್ಲದ, ಮುಂತಾದವರು ಉಪಸ್ಥಿತರಿದ್ದರು.



# ಸಾಮೂಹಿಕ ಪ್ರಾರ್ಥನೆ; ರಂಜಾನ್ ಹಬ್ಬಕ್ಕೆ ತೆರೆ



ಬೆಳಗಾವಿ ವಾರ್ತೆ

**ಗೋಕಾಕ:** ಕಳೆದ ಒಂದು ತಿಂಗಳನಿಂದ ಉಪವಾಸ ಆಚರಿಸುತ್ತಿದ್ದ ಮುಸ್ಲಿಂ ಭಾಂಧವರು ಶನಿವಾರದಂದು ರಮಜಾನ ಹಬ್ಬವನ್ನು ಸಡಗರದೊಂದಿಗೆ ಆಚರಿಸಿ, ಪರಸ್ಪರರು ಶುಭಾಶಯ ವಿನಿಮಯ ಮಾಡಿಕೊಂಡರು.

ನಗರದ ಅಬ್ದುಲ್ ಕಲಾಂ ಕಾಲೇಜಿನ ಈದ್ಗಾ ಮೈದಾನ ಹಾಗೂ ನಗರದ ಇತರ ಮಸೀದಿಗಳಲ್ಲಿ ಶನಿವಾರ ಬೆಳಿಗ್ಗೆ ಸಾಮೂಹಿಕ ಪ್ರಾರ್ಥನೆ ಮಾಡುವ ಮೂಲಕ ಮುಸ್ಲಿಂ ಸಮುದಾಯದವರು ರಂಜಾನ್ ಹಬ್ಬಕ್ಕೆ ತೆರೆ ಎಳೆದರು.

ಮೌಲಾನಾ ತಲಹಾಸಾಬ ಕಟಹಾರಿ ರಂಜಾನ್ ಆಚರಣೆ ಕುರಿತು ಉಪದೇಶ ನೀಡಿದರು. ಸಮಾಜದಲ್ಲಿ ಸುಖ, ಶಾಂತಿ, ನೆಮ್ಮದಿ ನೆಲೆಸಲಿ ಎಂದು ಪ್ರಾರ್ಥಿಸಿದರು.

ಒಂದು ತಿಂಗಳು ಉಪವಾಸ ಆಚರಿಸಿದ ಬಳಿಕ ಜಕಾತ್, ಫಿತ್ರಾ ದಾನ ಮಾಡಿದರು.ಈ ವೇಳೆ ಹೊಸ ಬಟ್ಟೆಗಳಲ್ಲಿ, ಸಾಂಪ್ರದಾಯಿಕ ಪೋಷಾಕುಗಳಲ್ಲಿ ಕಂಗೊಳಿಸುತ್ತಿದ್ದ ಮಕ್ಕಳು ಹಬ್ಬದ ಸಂಭ್ರಮ ಹೆಚ್ಚಿಸಿದ್ದರು. ಈ ಸಂದರ್ಭದಲ್ಲಿ ಅಮೀರಸಾಬ ಹಾಜಿ ಕುತುಬುದ್ದೀನ ಬಸ್ಸಾಪೂರ, ನಗರಸಭೆ ಮಾಜಿ ಸದಸ್ಯರುಗಳಾದ ಅಬ್ಬಾಸ ದೇಸಾಯಿ,ಕುತಬ್ಬುದ್ದೀನ ಗೋಕಾಕ ಸೇರಿದಂತೆ ಸಾವಿರಾರು ಮುಸ್ಲಿಂ ಭಾಂಧವರು ಉಪಸ್ಥಿತರಿದ್ದರು.

BELAGAVI VARTE Kannada Daily morning news paper Editor, Printer, Publisher and Owned by MAHESHWARI BHIMASHI BHARAMANNAVAR, 221/1A/1A/1A MAHALINGESHWAR NAGAR, NEAR BCA HOSTEL BELAGAVI KARNATAKA 591307. Printed at RAJADHANI PRINTING PRESS, CTS NO.1720/B1, SHOP NO.2 KELKARBAG, BELAGAVI, KARNATAKA - 590001